ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 3, Nov-Dec 2021, Pp.111-140
©*IIMRD*, Mysuru

IIMRD JOURNALS

www.iimrd.com

# ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸ್ವಾತಂತ್ರ್ಯ ಹೋರಾಟ

**ರಾಮದಾಸ ರೆಡ್ಡಿ. ಎಸ್.ಜಿ.***

*ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು.

## ಸಾರಾಂಶ (Abstract)

*ಬ್ರಿಟಿಷರ ವಿರುದ್ಧ ನಡೆದ ಕರ್ನಾಟಕದ ಸ್ವಾತಂತ್ರ್ಯ ಚಳುವಳಿ ಭಾರತದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಆಂಗ್ಲರು ನಡೆಸಿದ ಆಕ್ರಮಣಕಾರಿ ನೀತಿ, ಅನ್ಯಾಯ, ಅತ್ಯಾಚಾರ, ಆರ್ಥಿಕ ಶೋಷಣೆಯ ವಿರುದ್ಧ ಭಾರತೀಯರು ಆಂಗ್ಲರ ವಿರುದ್ದ ದಂಗೆಯೆದ್ದರು, ಬ್ರಿಟಿಷರನ್ನು ಬಲಪ್ರಯೋಗದಿಂದ ಭಾರತದಿಂದ ಹೊರಹಾಕುವುದು ಅಸಾಧ್ಯವೆಂದು ಮನಗಂಡ ಭಾರತೀಯ ನಾಯಕರು ಶಾಂತಿಯುತವೂ, ದಕ್ಷಿಣ ಭಾರತದ ಹೃದಯ ಭಾಗದಲ್ಲಿರುವ ಹಿಂದಿನ ಮೈಸೂರು ಜಿಲ್ಲೆಯೆಂದರೆ ಈಗಿನ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳನ್ನು ಒಳಗೊಂಡ ವಿಶಾಲವಾದ ಜಿಲ್ಲೆ. ಈ ಜಿಲ್ಲೆಗಳು ಶಿಲಾಯುಗದ ಮಾನವನ ಕಾಲದ ಮತ್ತು ಇತಿಹಾಸ ಆರಂಭ ಕಾಲದ ನೆಲೆಗಳು ಮತ್ತು ಅವಶೇಷಗಳು ಈ ಭೂಭಾಗದಲ್ಲಿ ಸಂಶೋಧಿಸಲ್ಪಟ್ಟಿವೆ. ಈ ಭೂಪ್ರದೇಶಗಳನ್ನು ಆಳಿದ ರಾಜವಂಶಗಳಾದ ಗಂಗರು, ರಾಷ್ಟ್ರಕೂಟರು, ಚೋಳರು, ಹೊಯ್ಸಳರು, ವಿಜಯನಗರ, ಮೈಸೂರು ಒಡೆಯರು ಹಾಗೂ ಇತರರು ಆಳ್ವಿಕೆ ನಡೆಸಿದರು. ಪ್ರಸ್ತುತ ಲೇಖನದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ* ಚಳುವಳಿ, ಭಾಷಣ, ತ್ಯಾಗ, ಬಲಿದಾನ, ಸತ್ಯಾಗ್ರಹಗಳು ಮತ್ತು ಪತ್ರಿಕೆಗಳ ಪಾತ್ರ, ಸಂಶೋಧಕರ ಪಾತ್ರಗಳನ್ನು ಕುರಿತು ವಿಮರ್ಶಿಸಲಾಗಿದೆ.

**ಮುಖ್ಯಪದಗಳು (Keywords):** ಭಾರತೀಯರು, ಕರ್ನಾಟಕ, ಮೈಸೂರು, ಚಾಮರಾಜನಗರ, ಬ್ರಿಟಿಷರು, ಹೋರಾಟ, ಚಳುವಳಿ, ಭಾಷಣ, ತ್ಯಾಗ, ಬಲಿದಾನ, ವಿದ್ಯಾರ್ಥಿ, ಸ್ವಾತಂತ್ರ್ಯ, ಸರ್ಕಾರ.

## ಪೀಠಿಕೆ

ಸ್ವಾತಂತ್ರ್ಯ ಚಳುವಳಿ ಆಧುನಿಕ ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಕಾಲ ಘಟ್ಟವಾಗಿದೆ. 15ನೇ ಮತ್ತು 16ನೇ ಶತಮಾನಗಳಲ್ಲಿ ಭೌಗೋಳಿಕ ಅನ್ವೇಷಣೆಗಳ ಫಲವಾಗಿ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಬ್ರಿಟಿಷರು ಭಾರತಕ್ಕೆ ಬಂದು ತಮ್ಮ ತಮ್ಮ ವಸಾಹತುಶಾಯಿ ಕೇಂದ್ರಗಳನ್ನು ಸ್ಥಾಪಿಸಿಕೊಂಡರು. ಇವರಲ್ಲಿ ಬ್ರಿಟಿಷರು ಪ್ರಬಲರಾಗಿ 1757ರ ಪ್ಲಾಸಿ ಕಾಳಗದಲ್ಲಿ ಜಯಗಳಿಸಿ ಬಂಗಾಳದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಸ್ಥಾಪಿಸಿ ಹಂತ ಹಂತವಾಗಿ ಇಡೀ ಭಾರತವನ್ನೆ ಜಯಿಸಿದರು. ಆಂಗ್ಲರು ರಾಬರ್ಟ್‌ಕ್ಲೈವ್‌ನಿಂದ ಹಿಡಿದು ಡಾಲ್‌ಹೌಸಿಯ ಕಾಲದವರೆಗೆ ಭಾರತೀಯರ ಆಶೋತ್ತರಗಳಿಗೆ ಸ್ಪಂದಿಸದೇ

*Please cite this article as: ರಾಮದಾಸ ರೆಡ್ಡಿ. ಎಸ್.ಜಿ. (2021). ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸ್ವಾತಂತ್ರ್ಯ ಹೋರಾಟ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 111–140.*

ರಾಜಕೀಯವಾಗಿ, ಆರ್ಥಿಕವಾಗಿ ನಿರಂತವಾಗಿ ಶೋಷಣೆಯನ್ನು ಮಾಡಿದರು. ತತ್ಪರಿಣಾಮವಾಗಿ ಭಾರತೀಯರು ಬ್ರಿಟಿಷರನ್ನು ಭಾರತದಿಂದ ಹೊರ ಹಾಕಲು ಸ್ವಾತಂತ್ರ್ಯ ಚಳುವಳಿಯನ್ನು ಆರಂಭಿಸಿದರು. ಈ ಚಳುವಳಿ ಕರ್ನಾಟಕದಲ್ಲಿ ಆರಂಭವಾಯಿತು. ಕನ್ನಡಿಗರೆಲ್ಲ ನಾವೆಲ್ಲಾ ಒಂದೇ ಎಂಬ ಭಾವನೆ ಬೆಳೆದು ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪ್ರಾತ್ರವಹಿಸಿದರು. ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟಿದ್ದ ಮದ್ರಾಸ್–ಕರ್ನಾಟಕ ಮತ್ತು ಮುಂಬೈ–ಕರ್ನಾಟಕ ಭಾಗಗಳಲ್ಲಿ ಪ್ರಥಮವಾಗಿ ಸ್ವಾತಂತ್ರ್ಯ ಚಳುವಳಿ ಆರಂಭವಾಯಿತು. ಅನಂತರ ಹಳೆಯ ಮೈಸೂರಿಗೂ ಹರಡಿತು.

ಬ್ರಿಟಿಷರ ವಿರುದ್ದ ನಡೆದ ಕರ್ನಾಟಕದ ಸ್ವಾತಂತ್ರ್ಯ ಚಳುವಳಿ ಭಾರತದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಕರ್ನಾಟಕ ಸ್ವಾತಂತ್ರ್ಯ ಚಳುವಳಿಯನ್ನು ಸ್ಥೂಲವಾಗಿ ಎರಡು ಹಂತಗಳಾಗಿ ವಿಗಂಡಿಸ ಬಹುದು. ಸಶಸ್ತ್ರ ಪ್ರತಿಭಟನೆಗಳು 1761 ರಿಂದ 1857ರವರೆಗೆ, ಅಹಿಂಸಾತ್ಮಕ, ಹಿಂಸಾತ್ಮಕ ಪ್ರತಿಭಟನೆಗಳು 1885 ರಿಂದ 1947ರವರೆಗೆ ನಡೆದವು. ಕ್ರಿ.ಶ.1757 ರಿಂದ 1857ರವರೆಗಿನ ಒಂದು ಶತಮಾನದ ಅವಧಿಯಲ್ಲಿ ಆಂಗ್ಲರು ನಡೆಸಿದ ಆಕ್ರಮಣಕಾರಿ ನೀತಿ, ಅನ್ಯಾಯ, ಆತ್ಯಾಚಾರ, ಆರ್ಥಿಕ ಶೋಷಣೆಯ ವಿರುದ್ಧ ಭಾರತೀಯರು ಆಂಗ್ಲರ ವಿರುದ್ದ ದಂಗೆಯೆದ್ದರು, ಈ ಹಂತವೇ ಸಶಸ್ತ್ರ ಪ್ರತಿಭಟನೆಯ ಕಾಲವಾಯಿತು. ಬ್ರಿಟೀಷರನ್ನು ಬಲಪ್ರಯೋಗದಿಂದ ಭಾರತದಿಂದ ಹೊರಹಾಕುವುದು ಅಸಾಧ್ಯವೆಂದು ಮನಗಂಡ ಭಾರತೀಯ ನಾಯಕರು ಶಾಂತಿಯುತವೂ, ನೂತನವೂ ಆದ ಸತ್ಯಾಗ್ರಹವನ್ನು ಆರಂಭಿಸಿದರು. ಈ ದಿಸೆಯಲ್ಲಿ ರಾಷ್ಟೀಯತೆಯನ್ನು ಮೈಗೂಡಿಸಿಕೊಂಡ ಕನ್ನಡಿಗರು ಬ್ರಿಟಿಷರ ವಿರುದ್ದ ಅಹಿಂಸಾತ್ಮಕ ನಂತರ ಹಿಂಸಾತ್ಮಕ ಸ್ವಾತಂತ್ರ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದರು. 1885ರಲ್ಲಿ ಭಾರತದ ರಾಷ್ಟೀಯ ಕಾಂಗ್ರೆಸ್‌ನ ಸ್ಥಾಪನೆಯೊಂದಿಗೆ ಆರಂಭವಾದ ಈ ಚಳುವಳಿ 1947ರವರೆಗೂ ಮುಂದುವರಿಯಿತು.

ಶ್ರೀರವೀಂದ್ರನಾಥ ಠಾಕೂರ್– ಯಾವ ರಾಷ್ಟ್ರಗಳು ತಮ್ಮ ಅಂತ: ಸತ್ವವನ್ನು ತಮ್ಮದೇ ಇತಿಹಾಸದ ಕನ್ನಡಿಯಲ್ಲಿ ಕಾಣುತ್ತವೋ ಆ ದೇಶಗಳು ಭಾಗ್ಯಶಾಲಿ ದೇಶಗಳು ಅನಿಸಿಕೊಳ್ಳುತ್ತವೆ ಎಂದು ಇತಿಹಾಸದ ಶ್ರೇಷ್ಠತೆಯನ್ನು ತಿಳಿಸಿರುವ ಶ್ರೀರವೀಂದ್ರನಾಥ ಠಾಕೂರ್‌ರವರ ಮಾತನ್ನು ಗಮನಕ್ಕೆ ತೆಗೆದುಕೊಂಡು ಕಾರ್ಯಪ್ರವೃತ್ತರಾಗಬೇಕಾಗಿದೆ. ದೇಶಕ್ಕಾಗಿ ದುಡಿದವರ, ಮಡಿದವರ ದೃಷ್ಟಿಯಲ್ಲಿ ಭಾರತವೆಂದರೆ ಕೇವಲ ಮಣ್ಣಿನ ತುಂಡು ಅಲ್ಲ, ಅದು ಪುಣ್ಯಭೂಮಿ, ಕರ್ಮಾಭೂಮಿ, ದೇವಭೂಮಿ. ಸ್ವಾತಂತ್ರ್ಯವೆಂದರೆ ಕೇವಲ ರಾಜಕೀಯ ಅಧಿಕಾರದ ಆಟವಲ್ಲ, ಅದು ವ್ಯಕ್ತಿಯ ಮತ್ತು ದೇಶದ ಅಂತರಾತ್ಮದ ಬೆಳಕಿನ ಅಮೃತ ಉಣಿಸು. ಅದನ್ನು ಬೆಳೆದು, ನೀಡಿ ಹೋದ ಅಸಂಖ್ಯಾತ ವೀರಸ್ವಾತಂತ್ರ್ಯ ಸೇನಾನಿಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಅಮರರಾಗಿದ್ದಾರೆ.

**ಪತ್ರಿಕೆಗಳ ಪಾತ್ರ**

19ನೇ ಶತಮಾನದ ಅಂತ್ಯದಲ್ಲಿ ಮತ್ತು 20ನೇ ಶತಮಾನದ ಪ್ರಾರಂಭದಲ್ಲಿ ಹೊರ ಬಂದ ದಿನಪತ್ರಿಕೆಗಳು, ವಾರ ಮತ್ತು ಮಾಸ ಪತ್ರಿಕೆಗಳು ತಮ್ಮ ನಿರ್ಭೀತ, ನಿಷ್ಪಕ್ಷಪಾತವಾದ ಟೀಕೆ, ಟಿಪ್ಪಣಿಗಳಿಂದ ಸಮಾಜ ಮತ್ತು ಸರ್ಕಾರವನ್ನು ತಿದ್ದುವ ಕೆಲಸವನ್ನು ಮಾಡುತ್ತಾ ಹೋದವು. ರಾಜಧಾನಿ ಮೈಸೂರಿನಲ್ಲಿ

ಎಲ್ಲಾ ರಾಜಕೀಯ ಮುಖಂಡರು, ಹೋರಾಟಗಾರರು ಸದಾ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಮೂಲಕ ನಾಡಿನ ಸ್ವಾತಂತ್ರ್ಯವನ್ನು ಮುನ್ನಡೆಸಿದರು. ಮೈಸೂರನ್ನು ಆಳಿದ ಒಡೆಯರು ದಕ್ಷರು, ಸಮರ್ಥರು ಆಗಿದ್ದು ರಾಜ್ಯವನ್ನು ಪ್ರಗತಿಯ ಹಾದಿಯಲ್ಲಿ ಮುನ್ನಡೆಸಿದರು.

ಕರ್ನಾಟಕ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿ ಇತ್ತು, ಇಲ್ಲಿ ಪ್ರಾರಂಭವಾದ ಪತ್ರಿಕೆಗಳು ಜಿಲ್ಲೆಯ ಹಾಗೂ ನಾಡಿನ ಜನರಲ್ಲಿ ಜಾಗೃತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿವೆ. ಭಾರತದಲ್ಲಿ ಯೂರೋಪಿನ ಮಾದರಿಯಲ್ಲಿ ಆಂಗ್ಲ ಮತ್ತು ದೇಶಿಯ ಭಾಷೆಗಳಲ್ಲಿ ಅನೇಕ ಪತ್ರಿಕೆಗಳು ಆರಂಭವಾದವು. ಇಂಡಿಯನ್ ಮಿರಾರ್, ದಿ ಹಿಂದೂ, ಬಾಂಬೆ ಸಮಾಚಾರ್, ದಿ ಕೇಸರಿ, ದಿ ಬೆಂಗಾಲಿ ಮುಂತಾದ ಪತ್ರಿಕೆಗಳು ಭಾರತೀಯರಲ್ಲಿ ಹೊಸ ಜಾಗೃತಿ ಉಂಟು ಮಾಡಿದವು. ಲೋಕಮಾನ್ಯ ತಿಲಕರು ಅವರು ನಡೆಸುತ್ತಿದ್ದ ಕೇಸರಿ ಪತ್ರಿಕೆ ಕರ್ನಾಟಕ ಜನತೆಯ ಮೇಲೆ ಬೀರಿದ ಪ್ರಭಾವ ಅಷ್ಟಿಷ್ಟಲ್ಲ. ತಿಲಕರ ಸ್ವಾತಂತ್ರ್ಯ ಹಂಬಲ, ಅವರ ಧೈರ್ಯ, ಉತ್ಸಾಹಗಳು ಕರ್ನಾಟಕದ ಜನತೆಯನ್ನು ಬಡಿದೆಬ್ಬರಿಸಿದವು.

ಕರ್ನಾಟಕ ಸ್ವಾತಂತ್ರ್ಯ ಚಳುವಳಿ ಮೈಸೂರು ಸಂಸ್ಥಾನದ ಮೂಲಕ ಆರಂಭವಾಯಿತು. 1865 ರಿಂದಲೇ ಕರ್ನಾಟಕ ಪ್ರಕಾಶಿಕೆ. ವೃತ್ತಾಂತ ಚಿಂತಾಮಣಿ. ಸಾಧ್ವಿ. ಸಂಪದಭ್ಯುದಯ.ವೃತ್ತಾಂತ ಬೋಧಿನಿ. ಮೈಸೂರು ಪತ್ರಿಕೆ, ಮೈಸೂರು ಹೆರಾಲ್ಡ್, ರಾಜಹಂಸ (1881), ಕರ್ನಾಟಕ ವೃತ್ತ (1880), ಧನಂಜಯ (1895), ಮೈಸೂರಿನ ವೃತ್ತಾಂತ ಚಿಂತಾಮಣಿ (1885) ಮಂಗಳೂರಿನ ಸ್ವದೇಶಿಭೂಮಿ (1907) ಸುಹಾಸಿನಿ ಪತ್ರಿಕೆ, ವಾಗ್ಭೂಷಣ ಮಾಸ ಪತ್ರಿಕೆ, ಎಂಬ ಪತ್ರಿಕೆಗಳು ಕನ್ನಡಿಗರಲ್ಲಿ ಸ್ವಾತಂತ್ರ್ಯ, ಸ್ವಾಭಿಮಾನ ಮತ್ತು ರಾಷ್ಟ್ರೀಯ ಭಾವನೆಗಳನ್ನು ಜಾಗೃತಿ ಗೊಳಿಸಿದವು. ಜನವಾಣಿ, ಮಾತೃಭೂಮಿ ಪತ್ರಿಕೆಗಳು (1942) ಪುರವಣಿ ಪತ್ರಿಕೆ, ಸಾಧ್ವಿಪತ್ರಿಕೆ, ಅರುಣಾ (1947), ಕರ್ಮವೀರ, ನವಶಕ್ತಿ, ಕರ್ನಾಟಕ ವೃತ್ತ, ಕರ್ನಾಟಕ ವೈಭವ, ರಾಷ್ಟ್ರಬಂಧು, ರಾಜಹಂಸ, ಕನ್ನಡಿಗ, ವಿಶ್ವಕರ್ನಾಟಕ, ಶರಣ ಸಂದೇಶ ವೃತ್ತಪತ್ರಿಕೆಗಳು ಚಳುವಳಿ ಬೆಳಸಲು ತುಂಬಾ ಸಹಾಯಕವಾದವು.

**ಸಂಶೋಧಕರು**

ಖ್ಯಾತ ಸಂಶೋಧಕ ಮತ್ತು ಇತಿಹಾಸಕಾರರಾದ ಜೆ.ಎಫ್.ಫ್ಲೀಟ್, ಬಿ.ಎಲ್.ರೈಸ್, ಆರ್.ನರಸಿಂಹಚಾರ್, ರಾಬರ್ಟ್‌ಸಿವೆಲ್, ಆಲೂರು ವೆಂಕಟರಾಯರು ಇತರರು ತಮ್ಮ ಸಂಶೋಧನೆ, ಲೇಖನ ಮತ್ತು ಅವರ ಗ್ರಂಥಗಳಿಂದ ಕನ್ನಡಿಗರಲ್ಲಿ ಅವರ ಪ್ರಾಚೀನ ಪರಂಪರೆ ಮತ್ತು ಸಂಸ್ಕೃತಿಯ ಬಗ್ಗೆ ಅರಿವನ್ನು ಉಂಟು ಮಾಡಿದರು. ಆಲೂರು ವೆಂಕಟರಾಯರು ರಚಿಸಿದ ಕರ್ನಾಟಕ ಗತವೈಭವ (1907) ಕನ್ನಡಿಗರಲ್ಲಿ ರಾಷ್ಟಾಭಿಮಾನ ಹಾಗೂ ಕನ್ನಡನಾಡು, ನುಡಿ,ಪರಂಪರೆಯನ್ನು ಪ್ರಚಾರ ಮಾಡಿ ಪ್ರಖರತೆಯನ್ನು ಪ್ರಜ್ವಲಿಸಿತು, ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಯಾಗಿ ಕನ್ನಡಿಗರಲ್ಲಿ ಪ್ರಾಂತ್ಯಾಭಿಮಾನ ಹಾಗೂ ದೇಶಾಭಿಮಾನ ಮೂಡಿತು. ಹುಯಿಲ ಗೋಳನಾರಾಯಣರಾಯರು, ಗೀತಾಮಂಗೇಶ, ಬಿ.ಎಂ.ಶ್ರೀ., ಕೆ.ವಿ.ಪುಟ್ಟಪ್ಪ, ವೆಂಕಟಾಚಾರ್ಯ, ಗಳಗನಾಥ, ಶಾಂತಕವಿ, ಕೆರೂರು ವಾಸುದೇವಾಚಾರ್ಯ, ಸುಭೋದರಾಮರಾಯರು, ನಾಗೇಶ ಮುಂತಾದವರು ತಮ್ಮ ಬರಹಗಳ ಮುಖಾಂತರ ಕನ್ನಡ ಜನತೆಯಲ್ಲಿ ದೇಶಭಕ್ತಿಯನ್ನು ಉಜ್ವಲಗೊಳಿಸಿದರು. ಆರ್ಯಸಮಾಜ, ಬ್ರಹ್ಮಸಮಾಜ, ಥಿಯೋಸಾಫಿಕಲ್ ಸೊಸೈಟಿ,

ರಾಮಕೃಷ್ಣ ಮಿಷನ್ ಅವುಗಳ ಶಾಖೆಗಳು ಕರ್ನಾಟಕದಲ್ಲಿ ಹುಟ್ಟಿಕೊಂಡು ಜನರಲ್ಲಿ ಹೊಸ ವಿಚಾರಧಾರೆ, ಸರ್ವಧರ್ಮ ಸಮನ್ವಯ ಭಾವನೆಗಳು ಬೆಳೆದವು.

ಪ್ರಸ್ತುತ ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕು 212, ನಂಜನಗೂಡು ತಾಲ್ಲೂಕು 31, ಟಿ.ನರಸೀಪುರ ತಾಲ್ಲೂಕು 22, ಕೆ.ಆರ್.ನಗರ ತಾಲ್ಲೂಕು 59, ಹುಣಸೂರು ತಾಲ್ಲೂಕು 33 ಒಟ್ಟು–347 ಸ್ವಾತಂತ್ರ್ಯ ಹೋರಾಟಗಾರರನ್ನು ಜಿಲ್ಲೆಯಲ್ಲಿ ದಾಖಲಿಸಿದ್ದಾರೆ. ಚಾಮರಾಜನಗರ ತಾಲ್ಲೂಕು 70, ಗುಂಡ್ಲಪೇಟೆ ತಾಲ್ಲೂಕು 20, ಒಟ್ಟು–90 ಸ್ವಾತಂತ್ರ್ಯ ಹೋರಾಟಗಾರರನ್ನು ಚಾಮರಾಜನಗರ ಜಿಲ್ಲೆಯಲ್ಲಿ ದಾಖಲಿಸಿದ್ದಾರೆ. ಇವರೆಲ್ಲರೂ ಯಾವ ಚಳುವಳಿಗಳಲ್ಲಿ ಭಾಗವಹಿಸಿದ್ದರು ಈ ವಿಷಯಗಳ ಬಗ್ಗೆ ಚರ್ಚಿಸೋಣ. ತಾತಯ್ಯನವರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕಾಯಿಲೆಯ ಚಿಕಿತ್ಸೆಗಾಗಿ ಒಳರೋಗಿಯಾಗಿ ಅವರು ಸೇರಿದರು. ಇದನ್ನು ತಿಳಿದ ನಾಲ್ವಡಿ ಕೃಷ್ಣರಾಜ ಒಡೆಯರು ಆಸ್ಪತ್ರೆಗೆ ಭೇಟಿ ನೀಡಿ ವೆಂಕಟಕೃಷ್ಣಯ್ಯನವರ ದರ್ಶನ ಪಡೆದು ಕಣ್ಣೀರಿಟ್ಟರು. ಆಗಿನ ಕಾಲದಲ್ಲಿ ಮೈಸೂರಿನಲ್ಲಿ ಈ ವಿಷಯ ಜನಜನಿತವಾಗಿತ್ತು. ಅವರ ನೆನಪಿಗಾಗಿ ಮೈಸೂರು ನಗರದಲ್ಲಿ ಪ್ರತಿಮೆಯನ್ನು ನಿರ್ಮಿಸಲಾಗಿದೆ. ಜನಸೇವೆ ಮಾಡಿ ದೇಹ ಸವೆಸಿದರು. ಇವರ ಗರಡಿಯಲ್ಲಿ ಈ ಭಾಗದ ಹಿರಿಯ ಸ್ವಾತಂತ್ರ ಹೋರಾಟಗಾರರಾದ ಅಗರಂ ರಂಗಯ್ಯ, ತಗಡೂರು ರಾಮಚಂದ್ರರಾಯರು, ಎಂ.ಎನ್.ಜೋಯಿಸ್, ರಂಗಧಾಮಯ್ಯ, ಎಚ್.ಸಿ.ದಾಸಪ್ಪ, ಸಾವುಕಾರ್ ಚೆನ್ನಯ್ಯ, ಯಶೋದಮ್ಮದಾಸಪ್ಪ ಮೊದಲಾದವರು ತಯಾರಾಗಿದ್ದಾರೆ.

ಮೈಸೂರಿನ ಟೌನ್‌ಹಾಲ್ ಹಾಗೂ ಸುಬ್ರಾಯನ ಕೆರೆಯ ಮೈದಾನದಲ್ಲಿ ನಡೆದ ಸಭೆಗಳು ಹಾಗೂ ರಾಷ್ಟ್ರೀಯ ನಾಯಕರ ಭಾಷಣಗಳಿಂದ ಪ್ರಭಾವಿತಗೊಂಡು ಸ್ವಾತಂತ್ರ್ಯ ಹೋರಾಟದಲ್ಲಿ ಸೆರಮನೆವಾಸ ಅನುಭವಿಸಿದವರ ಸಂಖ್ಯೆ ಅಪಾರವಾಗಿದೆ. 1921ರಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ (ಕೆ.ಪಿ.ಸಿ.ಸಿ.) ಅಸ್ತಿತ್ವಕ್ಕೆ ಬಂದಿತು.ಇದು ಹಳ್ಳಿ ಹಳ್ಳಿಗಳಲ್ಲಿ ಕಾರ್ಯಕರ್ತರನ್ನು ಹುಟ್ಟು ಹಾಕಿತು. 1923–30ರ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ನೇರವಾಗಿ ಪ್ರಮುಖವಾದ ಯಾವ ಚಳುವಳಿಗಳು ನಡೆಯುತ್ತಿರಲಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ನಡೆಯುತ್ತಿದ್ದ ಚಳುವಳಿಗಳ ಬಗ್ಗೆ ಸಹಾನುಭೂತಿ ತೋರಿಸುವ ಕೆಲಸ ಮಾತ್ರ ಮೈಸೂರು ಸಂಸ್ಥಾನದಲ್ಲಿ ಆಗುತ್ತಿತ್ತು.

**ಸುಬ್ಬರಾಯನ ಕೆರೆ ಮೈದಾನ ಮತ್ತು ಪುರ ಭವನ**

ಟೌನ್‌ಹಾಲ್ ಹಾಗೂ ಸುಬ್ಬರಾಯನ ಕೆರೆ ಮೈದಾನದಲ್ಲಿ ನಡೆದ ಸಭೆಗಳು ರಾಷ್ಟ್ರೀಯ ನಾಯಕರ ಭಾಷಣಗಳಿಂದ ಪ್ರಭಾವಿತಗೊಂಡು ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲ್ಗೊಂಡವರ ಸಂಖ್ಯೆ ಅಪಾರವಾಗಿದೆ. ವೆಂಕಟಕೃಷ್ಣಯ್ಯನವರು 1905 ಬಂಗಾಳದ ವಿಭಜನೆಯನ್ನು ವಿರೋಧಿಸಿ ಭಾಷಣ ಮತ್ತು ಲೇಖನಗಳ ಮೂಲಕ ಪ್ರೇರೇಪಿಸಿದರು.

ಮೈಸೂರಿಗೆ ಮಹಾತ್ಮಗಾಂಧಿಯವರು 1927, 1934ರಲ್ಲಿ ಎರಡು ಬಾರಿ ಆಗಮಿಸಿ ಸ್ವಾತಂತ್ರ್ಯ ಚಳುವಳಿಯನ್ನು ಜನತಾ ಆಂದೋಲನವನ್ನಾಗಿ ಮಾಡಿ ಬ್ರಿಟಿಷ್ ದೈತ್ಯಶಕ್ತಿಯ ವಿರೋಧವಾಗಿ ಸತ್ಯ, ಶಾಂತಿ ಮತ್ತು ಅಹಿಂಸೆಯ ಬೀಜ ಮಂತ್ರಗಳ ಮೂಲಕ ಸತ್ಯಾಗ್ರಹ ಸಮರವನ್ನು ಆರಂಭಿಸಿದರು. ಅವರ ಸತ್ಯಾಗ್ರಹ

ಚಳುವಳಿ ದೇಶದಲ್ಲಿ ಮನೆ ಮಾತಾಯಿತು. ಮೈಸೂರಿಗೆ ಮಹಾತ್ಮಗಾಂಧಿಯವರು ಆಗಮಿಸಿದ್ದಾಗ ಮೈಸೂರನ್ನು ರಾಮರಾಜ್ಯವೆಂದೂ, ನಾಲ್ವಡಿ ಕೃಷ್ಣರಾಜ ಒಡೆಯರನ್ನು ರಾಜರ್ಷಿ ಎಂದೂ ಕರೆದರು.

ಶ್ರೀರಂಗನಾಥ ನಾಯಕರು ವ್ಯಾಯಾಮ ಶಿಕ್ಷಣ ಶಿಬಿರ ಸ್ಥಾಪಿಸಿ ಯುವಜನರಲ್ಲಿ ಶಿಸ್ತು, ರಾಷ್ಟ್ರಭಕ್ತಿ, ಸೇವಾಮನೋಭಾವ ಬೆಳೆಸಲು ಶ್ರಮಿಸಿದರು. 1931ರಲ್ಲಿ ಜವಾಹರಲಾಲ್ ನೆಹರು ಅವರು ಮೈಸೂರಿಗೆ ಬಂದಿದ್ದಾಗ ಈ ಯೂತ್‌ಲೀಗಿಗೆ (ವ್ಯಾಯಾಮ ಶಿಕ್ಷಣ ಶಿಬಿರ) ಭೇಟಿ ನೀಡಿ ಅಲ್ಲಿನ ಕಾರ್ಯವನ್ನು ಮೆಚ್ಚಿದರು. ಇವರಿಗೆ ಮೈಸೂರು ಒಡೆಯರು ಆತೀಥ್ಯ ನೀಡಿದ್ದರು. ಅಂತೆಯೇ ಈ ಭಾಗದಲ್ಲಿ ಸಿ.ರಾಜಗೋಪಾಲಚಾರಿ, ಮುದುವೀಡುಕೃಷ್ಣರಾವ್, ಶ್ರೀನಿವಾಸರಾವ್ ಮೊದಲಾದ ರಾಷ್ಟ್ರನಾಯಕರು ಭಾಷಣಗಳ ಮೂಲಕ ಸ್ವಾತಂತ್ರ್ಯದ ಕಹಳೆಯನ್ನು ಮೊಳಗಿಸಿದ್ದಾರೆ. ರಾಷ್ಟ್ರಭಕ್ತಿಯ ನಂದಾದೀಪವನ್ನು ಬೆಳಗಿಸಿದ್ದಾರೆ.

ಸುಬ್ಬಮ್ಮ ಜೋಯಿಸರು 1938 ಜನವರಿ 26ರಂದು ಮೈಸೂರು ಸುಬ್ಬರಾಯನ ಕೆರೆಯಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣ ಮಾಡಿ ಬಂಧಿತರಾದರು. ಮೈಸೂರು ಪುರಭವನದಲ್ಲಿ ಪ್ರತಿಬಂಧಕಾಜ್ಞೆ ಮುರಿಯುತ್ತ ಭಾಷಣ ಮಾಡಿ ಮತ್ತೆ ಬಂಧಿತರಾದರು. ಬಿ.ನಾರಾಯಣಸ್ವಾಮಿ 1938ರಲ್ಲಿ ಎಚ್.ಸಿ ದಾಸಪ್ಪ, ಕೆ.ಬಿ.ಭಾಷ್ಯಂ, ರಂಗರಾಮಯ್ಯ ಮೊದಲಾದವರ ವಕೀಲಿ ಸದನವನ್ನು ಹೈಕೋರ್ಟ್ ರದ್ದು ಮಾಡಿದಾಗ ಮೈಸೂರಿನ ಸುಬ್ಬರಾಯನ ಕೆರೆಯಲ್ಲಿ ಪ್ರತಿಭಟನಾ ಸಭೆಯಲ್ಲಿ ಅವರು ಉಗ್ರವಾಗಿ ಭಾಷಣ ಮಾಡಿದರು. ಎರಡು ತಿಂಗಳ ಕಾಲ ಸೆರೆಮನೆವಾಸವಾಯಿತು. ಆರ್.ರಾಮಪ್ರಸಾದ್‌ರವರು 1942 ಸೆಪ್ಟೆಂಬರ್ 25ರಂದು ಸಂಜೆ ಮೈಸೂರು ಸುಬ್ಬರಾಯನ ಕೆರೆ ಮೈದಾನದಲ್ಲಿ ನಡೆಯುತ್ತಿದ್ದ ಬಹಿರಂಗ ಸಭೆಯಲ್ಲಿ ಭಾಗವಹಿಸಿ ಅಲ್ಲಿ ಆಕ್ಷೇಪಣೀಯವಾದ ಭಾಷಣ ಮಾಡಿದ್ದಾರೆ ಎಂಬ ಕಾರಣಕ್ಕಾಗಿ ದಸ್ತಗಿರಿ ಮಾಡಿದರು. 6 ತಿಂಗಳ ಸಜೆ, ರೂ.50 ದಂಡ ವಿಧಿಸಿತು.

ಸಿ.ಪಿ.ವೆಂಕಟನರಸಿಂಹನ್ ಮೈಸೂರು ಪುರಭವನದಲ್ಲಿ ಸ್ವಾತಂತ್ರ್ಯ ಲಭಿಸಿದ ಬಗ್ಗೆ ಸಾರ್ವಜನಿಕರನ್ನು ಉದ್ದೇಶಿಸಿ ಮಾಡಿದ ನಾಯಕರ ಭಾಷಣವನ್ನು ಕೇಳಿದ ಎಷ್ಟೋ ಸ್ವಾತಂತ್ರ ಯೋಧರ ಪೈಕಿ ನರಸಿಂಹನ್ ಸಹ ಒಬ್ಬರು. ಪಿ. ಗೋಪಾಲಕೃಷ್ಣ ಶೆಟ್ಟಿ ಇವರು ಮೈಸೂರಿನಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದರು. ಗಾಂಧೀಜಿ ಅವರ ಮೋಡಿಗೆ ಸಿಕ್ಕಿದ ಅನೇಕ ಜನರ ಪೈಕಿ ಇವರು ಒಬ್ಬರು. ಇವರು ಸಯ್ಯಾಜಿರಾವ್ ರಸ್ತೆಯ ತಮ್ಮ ಮನೆಯ ಮೇಲೆ ಏರಿಸಿದ ಕಾಂಗ್ರೆಸ್ ಬಾವುಟವನ್ನು ತಮ್ಮ ಕೊನೆಯ ಉಸಿರು ಇರುವವರೆಗೂ ಕೆಳಗಡೆ ಇಳಿಸಲಿಲ್ಲ. ಜೆ.ಸಿ.ಚಂದ್ರಶೇಖರ ಆರಾಧ್ಯ ಇವರು ಪರದೇಶಿ ವಸ್ತ್ರ ಬಹಿಷ್ಕಾರ ಹಾಗೂ ಖಾದಿ ವಸ್ತ್ರಧಾರಣೆ ಆಂದೋಲನದ ಬಗ್ಗೆ ವೃತ್ತ ಪತ್ರಿಕೆಗಳಲ್ಲಿ ಓದಿ ಪುಳಕಿತರಾದರು ಹಾಗೂ ದಿವಂಗತ ವೀರಕೇಸರಿ ಸೀತಾರಾಮಶಾಸ್ತ್ರಿಗಳು ಅಂಥವರ ಅಮೋಘ ಭಾಷಣ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವಂತೆ ಮಾಡಿತು. ಇವರು ಮೈಸೂರಿನ ಇಲವಾಲ ಗ್ರಾಮದಲ್ಲಿ ಉಪಾಧ್ಯಾಯರಾಗಿದ್ದು ಮೈಸೂರು ಪುರಭವನದ ಮೈದಾನದಲ್ಲಿ 144 ನಿಷೇದಾಜ್ಞೆ ಮುರಿದು ಭಾಷಣ ಮಾಡಿದರು. ಸುಬ್ಬರಾಯನ ಕೆರೆ ಮೈದಾನದಲ್ಲಿ ನಡೆದ ಸಭೆಯಲ್ಲಿ ಭಾಷಣ ಮಾಡಿದರು. ಪೊಲೀಸರು ಬಂಧಿಸಿ ಮೈಸೂರು ಸೆರೆಮನೆಗೆ ಕೊಂಡೊಯ್ದರು.

ಮೈಸೂರು ಜೈಲಿನಲ್ಲಿ ಸುಮಾರು 600 ಮಂದಿ ಸತ್ಯಾಗ್ರಹಿಗಳು ಇದ್ದರು. ಬಿಡುಗಡೆಯಾಗಿ ಇವರು ಹೊಮ್ಮನಹಳ್ಳಿಯ ಚರಕ ಸಂಘ ಮತ್ತು ಖಾದಿ ಭಂಡಾರ ಪ್ರಾರಂಭಿಸಿದರು.

**ವಿದೇಶಿ ವಸ್ತು ಬಹಿಷ್ಕಾರ ಚಳುವಳಿ**

ಮೈಸೂರು ಸಂಸ್ಥಾನದಲ್ಲಿ ಎಂ.ವೆಂಕಟಕೃಷ್ಣಯ್ಯನವರು. ಮೊದಲು ಜನಜಾಗೃತಿ ಉಂಟು ಮಾಡಿದರು. 1918ರ ವೇಳೆಗೆ ಶಾಸನಬದ್ಧ ಚಟುವಟಿಕೆಗಳಲ್ಲಿ ತೊಡಗಿದ್ದ ಕಾಂಗ್ರೆಸ್ ಗಾಂಧೀಜಿಯವರ ನೇತೃತ್ವದಲ್ಲಿ ಅಸಹಕಾರ ಚಳುವಳಿಯ ಮಾರ್ಗ ಹಿಡಿಯಿತು. 1920ರಿಂದ ಗಾಂಧಿಯುಗ ಕರ್ನಾಟಕದಲ್ಲಿ ಆರಂಭವಾಯಿತು. 1920ರಲ್ಲಿ ಮೈಸೂರಿನ ಸದ್ವಿದ್ಯಾ ಶಾಲೆಯ ಆವರಣದಲ್ಲಿ ವಿದೇಶಿ ವಸ್ತು ಬಹಿಷ್ಕಾರ ಚಳುವಳಿ ನಡೆಯಿತು. 15 ವರ್ಷದ ಬಾಲಕ ಎಂ.ಎನ್.ಜೋಯಿಸ್ ವಿದೇಶಿವಸ್ತ್ರ ದಹನ ಕಾರ್ಯಕ್ರಮದಲ್ಲಿ ತಮ್ಮ ಮೈಮೇಲಿನ ಉಡುಪುಗಳನ್ನು ಕಳಚಿ ಅಗ್ನಿಗೆ ಸಮರ್ಪಿಸಿ ಬಿಟ್ಟರು. ಇವರು ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಮೊಟ್ಟಮೊದಲು ಧುಮುಕಿದ ಅಗ್ರಪಂಕ್ತಿಯ ನಾಯಕರಲ್ಲಿ ಒಬ್ಬರು. ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಾದ ಎಂ.ವೆಂಕಟಕೃಷ್ಣಯ್ಯನವರು, ರಾಮರಾಯರು ಮತ್ತು ಅಂದಿನ ಕರ್ನಾಟಕದ ಗಂಡುಗಲಿ ಎನಿಸಿದ ಮುದವೀಡು ಕೃಷ್ಣರಾಯರ ಭಾಷಣದಿಂದ ಇವರು ಪ್ರೇರಿತರಾಗಿ, ಈ ದಿನವೇ (1920ನೇ ಇಸವಿ) ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಕಂಕಣತೊಟ್ಟು ನಿಂತರು. ಈ ಭಾಷಣವನ್ನು ಕೇಳಿದ ತಗಡೂರು ರಾಮಚಂದ್ರರಾಯರು ತಮ್ಮ ತಲ್ಲಂಗಡಿಯ ವ್ಯವಹಾರವನ್ನು ಬಿಟ್ಟು ಸ್ವದೇಶಿ ಚಳುವಳಿಯಲ್ಲಿ ತೊಡಗಿಕೊಂಡರು.

**ಮತಾಂತರ ವಿರೋಧ**

ತಗಡೂರು ರಾಮಚಂದ್ರರಾಯರು ಮೈಸೂರಿನವರು. ಮರಿಮಲ್ಲಪ್ಪ ಶಾಲೆಯಲ್ಲಿ ವಿದ್ಯಾಭ್ಯಾಸಕ್ಕೆ ಸೇರಿ ವಿದ್ಯಾಭ್ಯಾಸದಲ್ಲಿ ಆಸಕ್ತಿ ಇಲ್ಲದೆ ಉತ್ತರದೇಶಕ್ಕೆ ಹೊರಟರು. ಲೋಕಮಾನ್ಯ ಬಾಲಗಂಗಾಧರ್ ತಿಲಕ್, ದಾದಾಬಾಯಿ ನವರೋಜಿ, ಶಿವಾಜಿ ಮಹಾರಾಜ್ ಮೊದಲಾದ ರಾಷ್ಟ್ರ ನಾಯಕರ ಪ್ರತಿಮೆಗಳನ್ನು ಕಂಡು ಪುಳಕಿತರಾದರು. ಹಿಂದಿರುಗಿ ಮೈಸೂರಿಗೆ ಬಂದಾಗ ತಿಲಕ್ ಸಂಘದ ರಾಮಸ್ವಾಮಿ ಅಯ್ಯಂಗಾರರ ಸ್ನೇಹವಾಯಿತು.

ಮೈಸೂರು ಜಿಲ್ಲೆಯ ತಗಡೂರಿನ ಸಮೀಪ ಕಿರುಗುಂದ ಗ್ರಾಮ ಕ್ರೈಸ್ತಪಾದ್ರಿಗಳ ಕೇಂದ್ರವಾಗಿತ್ತು. ಅಲ್ಲಿಯ ಪಾದ್ರಿಗಳು ಹರಿಜನರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಲು ಅವರ ಕಡುಬಡತನವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದರು. ಹರಿಜನರಲ್ಲಿ ಒಡಕು ಹುಟ್ಟಿಸಿ ಹಣದ ಆಸೆ ತೋರಿಸಿ ಹಲವಾರು ಬಡಜನರನ್ನು ಕ್ರೈಸ್ತಮತಕ್ಕೆ ಸೇರಿಸಿಕೊಂಡರು. ಆಳರಸರ ಬೆಂಬಲವಿದೆ ಎಂಬ ಹಮ್ಮಿನಿಂದ ಪರಕೀಯ ಧರ್ಮಾಭಿಮಾನಿಗಳು ಹಿಂದೂ ಧರ್ಮದ ಮೇಲೆ ದುರಾಕ್ರಮಣ ಮಾಡುವುದನ್ನು ತಡೆಗಟ್ಟುವ ಉದ್ದೇಶದಿಂದ ಪ್ರಚಾರ ಕಾರ್ಯವನ್ನು ಕಡೂರಿನ ಸುತ್ತಮುತ್ತಲು ತಗಡೂರು ರಾಮಚಂದ್ರರಾಯರು ಕೈಗೊಂಡರು. ಮಿಷನರಿಗಳು ಪ್ರಚಾರಕ್ಕಾಗಿ ಹೋಗುತ್ತಿದ್ದ ಹಿಂದು ಜಾತ್ರೆಗಳಿಗೆ ರಾಯರು ಮತ್ತು ಅವರ ಸ್ನೇಹಿತರು ಹೋಗಿ ಖಂಡ ತುಂಡವಾಗಿ ಅವರನ್ನು ವಿಚ್ಛೇದಿತ ಕಾರ್ಯಕ್ರಮ ಬಹಳ ಬಿರುಸಾಗಿ ನಡೆಯಿತು. ಕ್ರಿಶ್ಚಿಯನ್ನರಾದ ಹಿಂದುಗಳನ್ನು ಪುನ; ಹಿಂದುಗಳಾಗಿ ಪರಿವರ್ತಿಸುವ ಕಾರ್ಯವನ್ನು ಸ್ವಾಮಿ

ಗೋವಿಂದಾಚಾರ್ಯರ ಸಹಾಯದಿಂದ ಕೈಗೊಂಡು ಒಂದು ಕ್ರಾಂತಿಯನ್ನೇ ಮಾಡಿದರು. 1919ನೇ ಏಪ್ರಿಲ್ ಒಂದನೇ ತಾರೀಖು ಸ್ವರಾಜ್ಯ ಮಂದಿರವನ್ನು ಕಡೂರಿನಲ್ಲಿ ಸ್ಥಾಪಿಸಿದರು.

**ಖಾದಿ ಗ್ರಾಮೋದ್ಯೋಗ**

ಶ್ರೀಮುದವೀಡು ಕೃಷ್ಣರಾಯರ ಪ್ರಭಾವ ತಗಡೂರ ಮೇಲೆ ಬಿದ್ದಿದ್ದುರ ಪರಿಣಾಮವಾಗಿ ಹಳ್ಳಿಯ ಹಳೆಯ ರಾಟೆಗಳನ್ನು ತೆಗೆಸಿ ಅವುಗಳನ್ನು ಹೂವಿನಿಂದ ಸಿಂಗರಿಸಿ ಒಂದು ಮೆರವಣಿಗೆಯನ್ನು ತಗಡೂರಿನಲ್ಲಿ ನಡೆಸಿದರು. ಅಂದಿನಿಂದ ನೂರಾರು ಜನ ತಗಡೂರಿನ ಸುತ್ತಮುತ್ತ ನೂಲಲು ಆರಂಭಿಸಿದರು. ಎಸ್.ನಾರಾಯಣರಾಯರನ್ನು ಕೂಡಿಕೊಂಡು ಖಾದಿ ಮಾರಾಟ, ಗಾಂಧಿ ನೋಟಿನ ಮಾರಾಟ ಆರಂಭಿಸಿದರು. ಇದರಿಂದ ರೂ.1000 ಕೂಡಿತು. ಹರಿಜನರು ನೇಯ್ದ ಬಟ್ಟೆಗಳನ್ನು ಆಗ ಸವರ್ಣಿಯರು ಹಾಕಿಕೊಳ್ಳುತ್ತಿರಲಿಲ್ಲ. ಖಾದಿ ಬಟ್ಟೆಯನ್ನು ಅವರ ಕೈಲಿ ಮಾಡಿಸಿ, ಮಾರಾಟ ಮಾಡಲು ತೊಡಗಿದ್ದರಿಂದ ಸವರ್ಣಿಯರು ತಗಡೂರಿಗೆ ಬಹಿಷ್ಕಾರ ಹಾಕಿದರು. ಗಾಂಧೀಜಿ 1920ರಲ್ಲಿ ಕರ್ನಾಟಕದಲ್ಲಿ ಪ್ರವಾಸ ಕೈಗೊಂಡಿದ್ದ ಪರಿಣಾಮ ಜನರ ನರನಾಡಿಗಳಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ತಗಡೂರಿನಲ್ಲಿ ಮತ್ತು ಬದನವಾಳ ಗ್ರಾಮಗಳಲ್ಲಿ ಖಾದಿ ಸಂಸ್ಥೆಗಳನ್ನು ಸ್ಥಾಪಿಸಲಾಯಿತು ಎಸ್.ವಿ.ಸುಬ್ಬರಾಮಯ್ಯ ಶಾರದಾವಿಲಾಸ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ ಜರುಗಿದ ಗಾಂಧಿ ಜಯಂತಿ ಸಮಾರಂಭದಲ್ಲಿ ಖಾದಿ ಮಾರಾಟದ ವ್ಯವಸ್ಥೆಯನ್ನು ಮಾಡಿದ್ದು ಅಂದಿನ ಮುಖ್ಯ ಅತಿಥಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು ಆತ್ಮೀಯವಾಗಿ ತಬ್ಬಿ ಕೊಂಡರಂತೆ, ಡಿ. ಬನುಮಯ್ಯನವರು ಮೈಸೂರಿನಲ್ಲಿ ಚರಕ ಸಂಘ ಆರಂಭಿಸಿ ಅಲ್ಲಿ ಬಂದು ನೋಲುವವರಿಗೆ ಹತ್ತಿಯನ್ನು ಒದಗಿಸುತ್ತಿದ್ದರು.

**ಧ್ವಜಾವಂದನೆ ಕಾರ್ಯಕ್ರಮ**

1919ರ ಎಪ್ರೀಲ್‌ನಲ್ಲಿ ನಡೆದು ಹೋದ ಜಲಿಯನ್ ವಾಲಾಬಾಗ್ ಕಗ್ಗೊಲೆಯ ನೆನಪಿಗಾಗಿ ಕಾಂಗ್ರೆಸ್ ಪ್ರತಿವರ್ಷ ಏಪ್ರಿಲ್ 6 ರಿಂದ 13ರವರೆಗೆ ರಾಷ್ಟ್ರಾದ್ಯಂತ ರಾಷ್ಟ್ರಸಪ್ತಾಹವನ್ನು ಆಚರಿಸುತ್ತಾ ಬಂದಿತ್ತು. 1923ರ ಏಪ್ರಿಲ್ 13ರಂದು ನಾಗಪುರದ ಕಾಂಗ್ರೆಸ್ ರಾಷ್ಟ್ರಧ್ವಜವನ್ನು ಹಿಡಿದು ಮೆರವಣಿಗೆ ನಡೆಸಿತು. ಮೈಸೂರು ಸಂಸ್ಥಾನದಿಂದ ಕೆ.ಜೀವಣ್ಣರಾವ್, ಬಿ.ರಾಮಸ್ವಾಮಿ ಆಯ್ಯಂಗಾರ್, ಬಿ.ರಂಗನಾಥರಾವ್, ಟಿ.ಎಸ್.ರಾಮಸ್ವಾಮಿಶಾಸ್ತ್ರಿ, ಸಿ.ರಾಜಗೋಪಾಲ್, ಡಿ.ಕೆ.ಭಾರದ್ವಾಜ್ ಇವರು ಈ ಧ್ವಜಾಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. 1923ರಲ್ಲಿ ಮೈಸೂರು ಸಂಸ್ಥಾನದಲ್ಲಿ ಹಿಂದಿ ತರಗತಿಗಳನ್ನು ತೆರೆಯಲಾಗಿತ್ತು. ಪಿ.ಆರ್.ರಾಮಯ್ಯ, ಡಿ.ಕೆ.ಭಾರದ್ವಾಜ್, ತಗಡೂರು ರಾಮಚಂದ್ರರಾವ್, ಡಾ.ಸಿ.ಬಿ.ರಾಮರಾವ್, ಎಂ.ವೆಂಕಟಕೃಷ್ಣಯ್ಯ, ಕೆ.ಶೇಷಾದ್ರಿ ಮುಂತಾದವರು ಹರಿಜನೋದ್ಧಾರ ಕಾರ್ಯದಲ್ಲಿ ತೊಡಗಿದ್ದರು.

ಮೈಸೂರಿನ ಸುಬ್ಬರಾಯನ ಕೆರೆಯಲ್ಲಿ ಧ್ವಜಾವಂದನೆ ಏರ್ಪಾಡಾಗಿತ್ತು. ಮುಖ್ಯ ಪಾತ್ರಧಾರಿಗಳಾಗಿದ್ದ ರಂಗಯ್ಯನವರನ್ನು ಮತ್ತು ಎಲ್.ವಿ. ರಾಜಗೋಪಾಲ್‌ರನ್ನು ಧ್ವಜವಂದನೆ ನಡೆಸಕೂಡದೆಂದು ಪೊಲೀಸರು ಒತ್ತಾಯ ತಂದು ದಸ್ತುಗಿರಿ ಮಾಡಿ ಧ್ವಜ ಕಿತ್ತುಕೊಂಡು ಹೋದರು. ಕೋರ್ಟಿನಲ್ಲಿ ಇವರ ವಿರುದ್ಧ ಮೊಕದ್ದಮೆ ಹೂಡಿದರು. ಸ್ವಲ್ಪಕಾಲ ನಂತರ ಮೊಕದ್ದಮೆಯನ್ನು ವಾಪಸ್ಸು ಪಡೆದರಲ್ಲದೆ ಧ್ವಜವನ್ನು ಹಿಂತಿರುಗಿಸಿದರು. ಆಗಿನ ಕಾಲಕ್ಕೆ ಧ್ವಜಾರೋಹಣವೇ ಒಂದು ರೋಮಾಂಚನಕಾರಿ ಸನ್ನಿವೇಶವಾಗಿತ್ತು.

**1924ರಲ್ಲಿ ನಡೆದ ಬೆಳಗಾಂ ಕಾಂಗ್ರೆಸ್ ಅಧಿವೇಶನದಲ್ಲಿ**

*ಮೈಸೂರಿನ ಪ್ರಮುಖ ನಾಯಕರಾಗಿ ಹನುಮಂತರಾವ್ ಕೌಜಲಗಿ, ಗಂಗಾಧರರಾವ್ ದೇಶಪಾಂಡೆ, ಯಶೋಧರಾದಾಸಪ್ಪ, ಗೌರಮ್ಮ, ಎನ್.ಎಸ್.ಸುಬ್ಬರಾವ್, ಭಾರಧ್ವಾಜ್, ರಾಮಯ್ಯ, ಹರ್ಡಿಕರ್ ಮಂಜಪ್ಪ, ಬಳ್ಳಾರಿಸಿದ್ದಮ್ಮ,* ಅಗರಂ ರಂಗಯ್ಯನವರು *ಮುಂತಾದವರು ಭಾಗವಹಿಸಿದ್ದರು.* ಈ ಅಧಿವೇಶನದ ನಂತರ ಅಗರಂ ರಂಗಯ್ಯನವರು ಮನೆ ಮನೆಗೆ ಖಾದಿ ಬಟ್ಟೆಯನ್ನು ಹೊತ್ತು ಹೋಗಿ ಮಾರುವ ಕೆಲಸ ಪ್ರತಿ ಭಾನುವಾರ ತಮ್ಮ ಮಿತ್ರರೊಡನೆ ಮಾಡುತ್ತಿದ್ದರು. ಈ ತರಹ ರಚನಾತ್ಮಕ ಕಾರ್ಯಗಳಲ್ಲಿ ಮುಖ್ಯ ಪಾತ್ರ ವಹಿಸಿದರು, ಈ ಆಧೀವೇಶನಕ್ಕೆ ಮೈಸೂರು ಸಂಸ್ಥಾನದಿಂದ ರಾಜಕಾರಣಿಗಳು ಮಾತ್ರವಲ್ಲದೆ, ವೀಣೆ ಶೇಷಣ್ಣರಂತಹ ಸಂಗೀತಗಾರರು ಹೋಗಿದ್ದರು. ಗಾಂಧೀಜಿಯವರ ಮುಂದೆ ನುಡಿಸಿ ಅವರ ಮೆಚ್ಚುಗೆಯನ್ನು ಪಡೆದಿದ್ದರು. ತಗಡೂರು ರಾಮಚಂದ್ರರಾಯರಿಗೆ ಈ ಆಧೀವೇಶನದಲ್ಲಿ ಗಾಂಧೀಜಿ ಮತ್ತು ಪಂಡಿತ ಮದನಮೋಹನ ಮಾಳವಿಯವರ ಸಂಪರ್ಕ ಬೆಳೆಯಿತು. ಅಧೀವೇಶನ ಮುಗಿಸಿ ಹಿಂತಿರುಗಿದ ಮೇಲೆ ಹರಿಜನ ಉದ್ದಾರದ ಕೆಲಸ ಮತ್ತು ಖಾದಿ ಕೆಲಸಗಳನ್ನು ಕೈಗೆತ್ತಿಕೊಂಡರು. ತಗಡೂರನ್ನು ಕೇಂದ್ರವನ್ನಾಗಿಸಿ ಕೊಂಡರು. ಅಲ್ಲಿ ಆಶ್ರಮವನ್ನು ಸ್ಥಾಪಿಸಿದರು. ಸುತ್ತಮುತ್ತ ಖಾದಿ ತಯಾರಿಕೆಗಾಗಿ ನೂರಾರು ಚರಕಗಳು ಕಾರ್ಯೋನ್ಮುಖರಾಗುವಂತೆ ಮಾಡಿದರು. ಹಾಗೆಯೇ ನೂರಾರು ಮಗ್ಗಗಳು ಕೆಲಸ ಮಾಡಲಾರಂಭಿಸಿದವು. ಆಶ್ರಮದಲ್ಲಿ ಹರಿಜನರಿಗಾಗಿ ಒಂದು ಹಾಸ್ಟೆಲ್ ಸ್ಥಾಪಿಸಿದರು. ತಗಡೂರಿನಲ್ಲಿ ಒಂದು ಗಣಪತಿ ದೇವಸ್ಥಾನ ಕಟ್ಟಿಸಿ, ಅಲ್ಲಿ ಹರಿಜನರು ನಿತ್ಯ ಪೂಜೆ ಮಾಡುವ ವ್ಯವಸ್ಥೆ ಮಾಡಿದರು. ಗ್ರಾಮದ ಜನರಿಗೆ ತಗಡೂರರು ತಗಡೂರು ಗಾಂಧಿಯಾದರು.

ರಾಮಚಂದ್ರ ಜೋಯಿಸರ ಅಧ್ಯಕ್ಷತೆಯಲ್ಲಿ ಮೈಸೂರು ವಿದ್ಯಾರ್ಥಿ ಸಂಸ್ಥೆ ಸ್ಥಾಪನೆಯಾಯಿತು. ಹೀಗೆ ಡೈಮಂಡ್‌ಲೀಗ್ ಮತ್ತು ಸ್ಟೂಡೆಂಟ್‌ಲೀಗ್ ಎಂಬ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಎನ್.ಡಿ.ಶ್ರೀರಂಗಾಚಾರ್, ಎ.ಸಿ.ಬೈರಪ್ಪ, ಕೆ.ಪುಟ್ಟಸ್ವಾಮಿ, ಮಾದಪ್ಪಗೌಡ, ಪದಕಿ ಕೃಷ್ಣಮೂರ್ತಿ, ಎಲ್,ವಿ.ರಾಜಗೋಪಾಲ್, ಶ್ರೀನಿವಾಸಚಾರ್ ಇವರುಗಳು ವಿದ್ಯಾರ್ಥಿ ಸಂಘಕ್ಕಾಗಿ ದುಡಿದರು. ಕೆ.ಶೇಷಾದ್ರಿರವರು ಹರಿಜನ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು.

ಗಾಂಧಿ ಟೋಪಿ ಗಾಂಧಿ ಟೋಪಿಗೆ ಬಹಳ ಮಹತ್ವವಿರುವ ಕಾಲ, ಆಗರಂ ರಂಗಯ್ಯನವರು ಕಾಂಗ್ರೆಸ್ ಸಂಘಟನೆಯ ಪೌರೋಹಿತ್ಯ ವಹಿಸಿದ್ದ ಆಗರಂರಂಗಯ್ಯನವರು ಮೈಸೂರಿನಲ್ಲಿ ನಡೆದ ಭಾಷಣಗಳಿಗೆ ವೇದಿಕೆ ವ್ಯವಸ್ಥೆ, ಕರಪತ್ರ ಹಾಗೂ ಪ್ರಚಾರ ಕಾರ್ಯ ನಿರ್ವಹಿಸಿದರು. ಮನೆ ಮನೆಗೂ ಖಾದಿ ಬಟ್ಟೆ ಹೊತ್ತು ಹೋಗಿ ಮಾರುವ ಕೆಲಸ ಪ್ರತಿ ಭಾನುವಾರ ತಮ್ಮ ಮಿತ್ರರೊಡನೆ ಈ ಕೆಲಸ ಮಾಡುತ್ತಿದ್ದರು. ಇವರಿಗೆ ಸಹಾಯಕರಾಗಿ ಸಂತೆಪೇಟೆಯ ವರ್ತಕರಾದ ಧರ್ಮಪ್ರಕಾಶ ಬನುಮಯ್ಯನವರು ಮತ್ತು ಪಿ.ಎಂ ಸಂಗಪ್ಪನವರು ಇದ್ದರು. ವಿದೇಶಿ ಟೋಪಿಯನ್ನು ಬಿಟ್ಟುಕೊಟ್ಟ ಎಲ್ಲಾ ಹುಡುಗರಿಗೂ ಪುಕ್ಕಟೆಯಾಗಿ ಗಾಂಧಿಟೋಪಿ ನೀಡುವ ವ್ಯವಸ್ಥೆಯಾಗಿತ್ತು. ಹಳೆಪರದೇಶಿ ಟೋಪಿಗೆ ಬದಲು ಹೊಸ ಗಾಂಧಿಟೋಪಿ ಎಂಬ ಘೋಷಣೆ ಆಗ ಮೈಸೂರಿನಲ್ಲಿ ಬಲು ಜನಪ್ರಿಯವಾಗಿತ್ತು. ಡಿ.ಬನುಮಯ್ಯನವರು ಮೈಸೂರಿನ ಸಾವಿರಾರು

ಹುಡುಗರಿಗೆ ಪುಕ್ಕಟೆ ಗಾಂಧಿ ಟೋಪಿಯನ್ನು ಹಂಚಿದರು. ತಗಡೂರರ ಖಾದಿ ಸಂಸ್ಥೆಗೆ ಬೆನ್ನೆಲುಬಾಗಿ ಇದ್ದರು.

**ಬೆಂಗಳೂರು ಸುಲ್ತಾನ್ ಪೇಟೆ ಗಣಪತಿ ಗಲಾಟೆ**

1928ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮತ್ತೊಂದು ದುರ್ಘಟನೆ ನಡೆಯಿತು. ಬೆಂಗಳೂರು ಸುಲ್ತಾನ್‌ಪೇಟೆ ಗಣಪತಿ ಗಲಾಟೆ. ಹಿಂದೂ–ಮುಸ್ಲಿಂ ಕೋಮುವಾರು ಘರ್ಷಣೆ ನಡೆದು ಆಹಿತ ವಾತಾವರಣವನ್ನು ಉಂಟು ಮಾಡಿತು. ಗಲಭೆಯನ್ನು ಅಡಗಿಸಲು ಪೊಲೀಸರು ಗುಂಡು ಹಾರಿಸಿದರು. ಈ ಸಂಧರ್ಭದಲ್ಲಿ (1928ರಲ್ಲಿ) ರಾಜಕೀಯ ಚಟುವಟಿಕೆಗಳಲ್ಲಿ ಬೆಂಗಳೂರಿನ ಡಿ.ವಿ.ಗುಂಡಪ್ಪನವರು, ಸಂಪಿಗೆ ವೆಂಕಟಪ್ಪಯ್ಯನವರು, ಎಸ್.ವಿ.ಸುಬ್ರಹ್ಮಣ್ಯಂ, ಜಮಖಂಡಿ ಭೀಮರಾವ್, ವೀರಕೇಸರಿ ಸೀತಾರಾಮಶಾಸ್ತ್ರಿ, ರಾಮಲಾಲ್ ತಿವಾರಿ, ಮೈಸೂರಿನ ಎಂ. ವೆಂಕಟಕೃಷ್ಣಯ್ಯನವರು, ತಗಡೂರು ರಾಮಚಂದ್ರರಾಯರು, ಹೊಸಕೊಪ್ಪ ಕೃಷ್ಣರಾಯರು, ತುಮಕೂರಿನ ಕೆ.ರಂಗಯ್ಯ ಅಯ್ಯಂಗಾರ್, ಮದ್ದೂರಿನ ಹೆಚ್.ಕೆ.ವೀರಣ್ಣ ಗೌಡರು ಆಧಾರ ಸ್ಥಂಭವಾಗಿದ್ದರು.

1930ರ ಕರನಿರಾಕರಣ ಚಳುವಳಿ ಮೈಸೂರು ಸಂಸ್ಥಾನಕ್ಕೆ ನೇರ ಸಂಬಂಧವಿರಲಿಲ್ಲ, ರಂಗಯ್ಯನವರು ಬಹುಮುಖ್ಯ ಪಾತ್ರವಹಿಸಿ ಕರ್ನಾಟಕದ ಜನರಿಗೆ ಸಹಾಯ ನೀಡುವ ಉದ್ದೇಶದಿಂದ ಸಂಸ್ಥಾನದ ಎಲ್ಲಾ ಕಡೆ ಅಲ್ಲಲ್ಲಿ ಸ್ವಯಂಸೇವಕ ಶಿಬಿರಗಳನ್ನು ಸ್ಥಾಪಿಸಿ, ಸತ್ಯಾಗ್ರಹಿಗಳನ್ನು ಕಳುಹಿಸಿಕೊಡುವ ಏರ್ಪಾಡಾಗಿತ್ತು. ಮೈಸೂರು ಜಿಲ್ಲೆಯಿಂದ ನಿಟ್ಟೂರು ಶ್ರೀನಿವಾಸರಾಯರು, ವೆಂಕಟರಂಗಯ್ಯ ಅಯ್ಯಂಗಾರ್, ರಾಜಗೋಪಾಲ, ಸುಬ್ಬರಾವ್‌ಉಪಾಧ್ಯ, ಎಂ.ಎನ್.ಜೋಯಿಸ್, ಸುಬ್ಬಮ್ಮಜೋಯಿಸ್, ಅಗರಂ ಸೂರ್ಯನಾರಾಯಣಪಂಡಿತ್, ಹುಣಸೂರು ಸೀತಾರಾಮ್ ಇವರೆಲ್ಲಾ ಮೈಸೂರು ಜಿಲ್ಲೆಯಿಂದ ಚಳುವಳಿಯಲ್ಲಿ ಯಶಸ್ವಿ ಪಾತ್ರವಹಿಸಿದ ಹಿರಿಯ ವ್ಯಕ್ತಿಗಳಾದರು. ಕೊಡುಗೈದಾನಿ ಧರ್ಮಪ್ರಕಾಶ ಬನುಮಯ್ಯನವರು ಸತ್ಯಾಗ್ರಹ ಮುಗಿಯುವವರೆಗೆ ತಿಂಗಳಿಗೆ 200 ರೂ.ಗಳನ್ನು ಮತ್ತು ಸಂತೆಪೇಟೆಯ ವರ್ತಕರೆಲ್ಲ ಸೇರಿ 1000 ರೂ.ಗಳನ್ನು ಸತ್ಯಾಗ್ರಹಕ್ಕಾಗಿ ಕಳುಹಿಸಿ ಕೊಡುತ್ತಿದ್ದರು. ಬಿ.ಎಸ್.ಶ್ರೀಕಂಠಯ್ಯ ಮೈಸೂರಿನವರು. ಕಾರವಾರ ಜಿಲ್ಲೆಯ ಅಂಕೋಲದಲ್ಲಿ ಕರ ಸತ್ಯಾಗ್ರಹ ಆರಂಭವಾದಾಗ ಒಂದು ವರ್ಷ ಹದಿನೈದು ದಿನಗಳ ಕಾಲ ಕಠಿಣ ಸಜಾ ಅನುಭವಿಸಿದರು.

ಸುಬ್ಬಮ್ಮ ಜೋಯಿಸ್ 1930ರಲ್ಲಿ ಶಿರಸಿ, ಸಿದ್ದಾಪುರ, ಅಂಕೋಲಗಳಲ್ಲಿ ನಡೆಯುತ್ತಿದ್ದ ಕರನಿರಾಕರಣ ಚಳುವಳಿ, ಜಂಗಲ್ ಸತ್ಯಾಗ್ರಹ, ಹುಲ್ಲುಬನಿ ಸತ್ಯಾಗ್ರಹಗಳಲ್ಲಿ ಭಾಗವಹಿಸಿದರು. ಇಲ್ಲಿ ಆರೇಳು ತಿಂಗಳು ಭೂಗತರಾಗಿ ಕರಪತ್ರಗಳನ್ನು ಪ್ಯಾಕ್ ಮಾಡಿ ಬೇರೆ ಊರಿಗೆ ಕಳುಹಿಸುವುದು, ಹಳ್ಳಿ ಹಳ್ಳಿಗಳಿಗೆ ಹೋಗಿ ಸ್ವಾತಂತ್ರ್ಯಕ್ಕಾಗಿ ಜನರನ್ನು ಪ್ರೇರೇಪಿಸುವುದು, ಪ್ರಭಾತಭೇರಿ, ಧ್ವಜವಂದನೆ, ಕಾಯ್ದೆ ಉಲ್ಲಂಘನಾ ಚಳುವಳಿಗಳಲ್ಲಿ ಸ್ತ್ರೀಯರನ್ನು ಒಗ್ಗೂಡಿಸುತ್ತ ಗಣನೀಯ ಪಾತ್ರ ನಿರ್ವಹಿಸಿದರು.

ಸತ್ಯಾಗ್ರಹಿಗಳ ಆಸ್ತಿಪಾಸ್ತಿಗಳನ್ನು ಜಪ್ತಿ ಮಾಡಿ ಸರ್ಕಾರ ವಶಪಡಿಸಿಕೊಂಡು ಹರಾಜು ಹಾಕುತ್ತಿತ್ತು. ಈ ಅನ್ಯಾಯವನ್ನು ತಡೆಯಲೆಂದು ಸತ್ಯಾಗ್ರಹಿಗಳ ಮಾಲನ್ನು ಯಾರೂ ಕೊಳ್ಳದಂತೆ, ಹಾಗೆ ಕೊಂಡು ಕೊಂಡವರ ಮನೆ ಮುಂದೆ ಉಪವಾಸ ಸತ್ಯಾಗ್ರಹ ನಡೆಸುತ್ತಾ ಮಾಲು ಹಿಂತಿರುಗಿಸುವಂತೆ ಮಾಡಲು

ಮತ್ತೊಂದು ಸತ್ಯಾಗ್ರಹ ಆರಂಭವಾಯಿತು. ಹೆಜ್ಜೆ ಸತ್ಯಾಗ್ರಹ, ಅಕ್ಕುಂಜಿ ಸತ್ಯಾಗ್ರಹ, ಮಾವಿನಗುಂಡಿ ಸತ್ಯಾಗ್ರಹಗಳೆಲ್ಲಾ ಯಶಸ್ವಿಯಾದವು.

ಜಂಗಲ್ ಸತ್ಯಾಗ್ರಹ (ಆರಣ್ಯ ಸತ್ಯಾಗ್ರಹ) ಅಗರಂ ರಂಗಯ್ಯನವರು ಜಂಗಲ್ ಸತ್ಯಾಗ್ರಹ, ಹುಲ್ಲುಬನ್ನಿ ಸತ್ಯಾಗ್ರಹ, ಇವುಗಳಿಗೆ ಜನಸಹಾಯ, ಧನಸೇವೆ ಸಲ್ಲಿಸಿದರು.ಈ ಎಲ್ಲಾ ವಿವರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದರು.ಹಾಗೆ ಕರಪತ್ರ ಹಂಚುವುದು, ಸ್ವಯಂಸೇವಕರನ್ನು ಒಗ್ಗೂಡಿಸಿ ಕಳುಹಿಸುವುದು ಆಗಿತ್ತು. ರಾಜಗೋಪಾಲ, ಸುಬ್ಬರಾವ್ಉಪಾಧ್ಯ, ಎಂ.ಎನ್.ಜೋಯಿಸ್, ಸುಬ್ಬಮ್ಮಜೋಯಿಸ್, ಅಗರಂ ಸೂರ್ಯನಾರಾಯಣಪಂಡಿತ್, ಹುಣಸೂರುಸೀತಾರಾಮ್ ಇವರೆಲ್ಲ ಮೈಸೂರು ಜಿಲ್ಲೆಯಿಂದ ಚಳುವಳಿಯಲ್ಲಿ ಯಶಸ್ವಿ ಪಾತ್ರವಹಿಸಿದ ಹಿರಿಯ ವ್ಯಕ್ತಿಗಳಾದರು.

ಶಿವಪುರ ಕಾಂಗ್ರೆಸ್ ಮಹಾಧಿವೇಶನ 1938ನೇ ಫೆಬ್ರವರಿ 28ನೇ ತಾರೀಕು ಮಹಾಶಿವರಾತ್ರಿಯ ದಿನ ಮೈಸೂರಿನಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಸಭೆ ಸೇರಿ ಮೈಸೂರು ಕಾಂಗ್ರೆಸ್ ಎಂಬ ಹೆಸರಿನ ಒಂದು ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಲು ನಿರ್ಣಯ ಮಾಡಿದರು.ಈ ಆಧಿವೇಶನದಲ್ಲಿ ಮದ್ದೂರಿನ ಬಳಿ ಇರುವ ಶಿವಪುರದಲ್ಲಿ 1938ನೇ ಏಪ್ರಿಲ್‌ನಲ್ಲಿ ಸಮಾವೇಶ ಮಾಡಲು ತಿರ್ಮಾನಿಸಿದರು.

ಗಾಂಧೀಜಿಯವರ ಭೇಟಿ ಟಿ.ಸಿದ್ದಲಿಂಗಯ್ಯ ಮತ್ತು ಭೂತಾಳಂ ಚಂದ್ರಶೇಖರ್‌ರವರು ಗಾಂಧೀಜಿಯವರು ಇರುವ ಸ್ಥಳಕ್ಕೆ ಹೋಗಿ ಬೇಟಿ ಮಾಡಿ ಶಿವಪುರದಲ್ಲಿ ನಡೆಯುವ ಧ್ವಜ ಸತ್ಯಾಗ್ರಹದ ಬಗ್ಗೆ ಮಾಹಿತಿ ನೀಡಿದರು. ಗಾಂಧೀಜಿಯವರು ಶಿವಪುರದಲ್ಲಿ ಧ್ವಜ ಸತ್ಯಾಗ್ರಹ ಮಾಡಲು ಅನುಮತಿ ನೀಡಲಿಲ್ಲ. ಆದರೂ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ತೀರ್ಮಾನಿಸಿದಂತೆ ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ ಮದ್ದೂರಿನ ಬಳಿ ಇರುವ ಶಿವಪುರದಲ್ಲಿ 1938ನೇ ಏಪ್ರಿಲ್ 11, 12, 13ನೇ ತಾರೀಖು ಸಮಾವೇಶ ಗೊಂಡಿತು. ರಾಷ್ಟಕೂಟ ವೇದಿಕೆಯ ಮೇಲೆ ನಡೆಯುವ ಕಾರ್ಯಕ್ರಮಕ್ಕೆ ಸಂಸ್ಥಾನದ ನಾನಾ ಕಡೆಗಳಿಂದ 30 ರಿಂದ 40 ಸಾವಿರ ಜನ ನೆರೆದಿದ್ದರು. ಪೋಲೀಸ್ ಇಲಾಖೆಯ ಮುಖ್ಯಸ್ಥ ಐ.ಜಿ.ಪಿ.ಹ್ಯಾಮಿಲ್ಟನ್ ವೇದಿಕೆಯ ಉಸ್ತುವಾರಿ ನೋಡಿ ಕೊಳ್ಳುತ್ತಿದ್ದರು. ಸರ್ಕಾರ ಕಾಲ್ಕೇರೆದು ಕಾಂಗ್ರೆಸ್‌ನೊಡನೆ ಹೋರಾಟಕ್ಕೆ ನಿಂತಿತು. ಮೈಸೂರು ಒಡೆಯರ ವಿರುದ್ದವಾಗಿ ಚಳುವಳಿ ನಡೆಯಿತು.

ಅಧಿವೇಶನದ ಸ್ಥಳಕ್ಕೆ 300 ಜನ ಸಶಸ್ತ್ರ ಪೊಲೀಸ್‌ದಳವೊಂದು ಮೊದಲನೇ ದಿನವೇ ಶಿವಪುರಕ್ಕೆ ಬಂದಿತ್ತು. ರಾಷ್ಟ್ರಧ್ವಜ ಆರೋಹಣ ಮಾಡಕೂಡದೆಂದು ವೈಯಕ್ತಿಕವಾಗಿ ಕಾಂಗ್ರೆಸ್ ನಾಯಕರಿಗೆ ಎಲ್ಲಾ ಆಜ್ಞೆ ಜಾರಿಮಾಡಲಾಯಿತು. ಕಾಂಗ್ರೆಸ್ ನಾಯಕರು ಸಮಾಲೋಚನೆ ನಡೆಸಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸ ತಕ್ಕದೆಂದು ನಿರ್ಣಯಿಸಿದರು. ಶಾಂತ ರೀತಿಯಿಂದ ಧ್ವಜಾರೋಹಣ ಕಾರ್ಯಕ್ರಮ ನಡೆಸಲು ಸಿದ್ಧತೆಗಳಾದವು.

**1938ನೇ ಏಪ್ರಿಲ್ 10ರಂದು ಅಧ್ಯಕ್ಷರ ಮೆರವಣಿಗೆ**

101 ಜೋಡೆತ್ತಿನ ಗಾಡಿಗಳ ಮೂಲಕ ಆರಂಭವಾಯಿತು. 1938ನೇ ಏಪ್ರಿಲ್ 11ರಂದು ಅಧಿವೇಶನದ ಕಾರ್ಯಕ್ರಮ ಧ್ವಜಾರೋಹಣದೊಡನೆ ಬೆಳಿಗ್ಗೆ 8:00 ಗಂಟೆಗೆ ಆರಂಭವಾಯಿತು. ಧ್ವಜಾರೋಹಣ ಮಾಡಿದ ಕಾಂಗ್ರೆಸ್ ಅಧ್ಯಕ್ಷ ಟಿ.ಸಿದ್ದಲಿಂಗಯ್ಯನವರನ್ನು ದಸ್ತಗಿರಿ ಮಾಡಿದೊಡನೆ ಎಂ.ಎನ್.ಜೋಯಿಸರು

ಧ್ವಜಾವೇದಿಕೆಯ ಎದುರು ಬಂದೂಕುಧಾರಿಗಳಾದ ಮೀಸಲು ಪಡೆಯವರು, ಲಾಠಿ ಹಿಡಿದ ಸಾವಿರಾರು ಸಂಖ್ಯೆಯ ಪೋಲೀಸ್‌ನವರು, ಅವರನ್ನು ನೋಡಿಯೂ ಅಂಜದೆ, ಅಳುಕದೆ ಗಂಡೆದೆಯಿಂದ ನಾಡಧ್ವಜವನ್ನು ಮೇಲೇರಿಸಿ ಬಿಟ್ಟರು. ಈ ಘಟನೆ ಕಾಂಗ್ರೆಸ್ ಇತಿಹಾಸದಲ್ಲಿ ಚಿರಸ್ಮರಣೀಯ. ತಕ್ಷಣ ಸೇವಾದಳದ ಜಿ.ಓ.ಸಿ, ಎಂ.ಎನ್.ಜೋಯಿಸರ ಬಂಧನವಾಯಿತು.

ಎರಡನೇ ದಿನ ಎಚ್.ಎಸ್ ದಾಸಪ್ಪನವರು ಬೆಳಿಗ್ಗೆ ಧ್ವಜವಂದನೆ ಮಾಡಿದರು. ಮೂರನೇ ದಿನ ಬಳ್ಳಾರಿ ಸಿದ್ಧಮ್ಮನವರು ಬೆಳಿಗ್ಗೆ ಧ್ವಜವಂದನೆ ಮಾಡಿದರು. ವಿ.ವೆಂಕಟಪ್ಪ, ಡಾಕ್ಟರ್ ಪಾರ್ಥನಾರಾಯಣ ಪಂಡಿತರು, ಕೆ.ಚಂಗಲರಾಯರೆಡ್ಡಿ ಅವರು. ಬಳ್ಳಾರಿ ಸಿದ್ಧಮ್ಮನವರು. ಯಶೋದರ ದಾಸಪ್ಪ, ತುಳಸಿದಾಸಪ್ಪ, ಕೆ.ಟಿ.ಭಾಷ್ಯಂರವರು ಬಂಧಿತರಾದರು. ಶಿವಪುರ ಧ್ವಜ ಸತ್ಯಾಗ್ರಹ ಇಡೀ ದೇಶದ ಗೌರವದ ಪ್ರಶ್ನೆಯಾಗಿ ಪರಿಣಮಿಸಿತು. ಈ ಸತ್ಯಾಗ್ರಹ ಮೈಸೂರು ಕಾಂಗ್ರೆಸ್ಸಿನ ಹೋರಾಟದ ಇತಿಹಾಸದಲ್ಲಿ ಒಂದು ರೋಮಾಂಚನಕಾರಿ ಮೈಲಿಗಲ್ಲು. ನಾಗಪುರ ಧ್ವಜ ಸತ್ಯಾಗ್ರಹದಷ್ಟೆ ಮಹತ್ವಪೂರ್ಣವಾದ ಈ ಸತ್ಯಾಗ್ರಹದಿಂದ ಪುಳಕಿತಗೊಂಡ ಅನೇಕ ಸತ್ಯಾಗ್ರಹಿಗಳು ಮೈಸೂರು ಸಂಸ್ಥಾನದ ವಿವಿಧ ಸ್ಥಳಗಳಲ್ಲಿ ಧ್ವಜಾರೋಹಣ ನಡೆಸಲು ಸಂಕಲ್ಪ ಮಾಡಿ ಸರ್ವತ್ಯಾಗಕ್ಕೂ ಸಿದ್ಧರಾದರು. ಪಾಲಳ್ಳಿಸೀತಾರಾಮಯ್ಯ, ಪತ್ನಿವೆಂಕಮ್ಮ ಇವರಿಬ್ಬರು ಶಿವಪುರ ಕಾಂಗ್ರೆಸ್ಸಿನಲ್ಲಿ ಪ್ರಧಾನ ಪಾತ್ರವಹಿಸಿದರು.

ಪಿ.ಗೋಪಾಲಕೃಷ್ಣಶೆಟ್ಟಿ, ಎಂ.ಶಂಕರಯ್ಯ, ಕೆ.ಪುಟ್ಟಸ್ವಾಮಿ, ಇವರು ಮೈಸೂರಿನ ನಿಷ್ಠಾವಂತ ವಕೀಲರು. ಹೆಚ್.ಸಿ.ದಾಸಪ್ಪನವರ ಶಿಷ್ಯರಾಗಿದ್ದರು ಹಾಗೂ ವಕೀಲರಾದ ಮರಿಯಪ್ಪ, ಎಸ್.ವಿ.ಸುಬ್ಬರಾಮಯ್ಯ ಇವರು ಸ್ವಯಂಸೇವಕರಾಗಿ ಸೇವೆ ಸಲ್ಲಿಸಿದರು. ಒ.ಚಂದ್ರಶೇಖರಗೌಡ, ಈ.ಪಿ.ನಂಜಪ್ಪ, ನಾ.ಬದ್ರಯ್ಯ, ಮಳವಳ್ಳಿ ವೀರಪ್ಪ, ಯು.ಎಲ್.ರಾಮಚಂದ್ರರಾವ್, ಕೆಂಪಲಿಂಗಯ್ಯ ಇತರರು ಕಾಂಗ್ರೆಸ್ಸಿನ ಕಾರ್ಯದಲ್ಲಿ ಪಾದರಸದಂತೆ ಕೆಲಸ ಮಾಡಿದರು.

ಎ.ರಾಮಣ್ಣ ಇವರು ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ವಿಕಳಭಾವದಲ್ಲಿ, ಮುಂಡಕೂರು ಸಂತ್ರಾಲಗುತ್ತಿನಲ್ಲಿ ಬೆಳೆದು 1937ರ ಅಕ್ಟೋಬರ್ ತಿಂಗಳಲ್ಲಿ ಮೈಸೂರು ನಗರಕ್ಕೆ ಬಂದವರೇ ರಾಜ್ಯ ಚಳುವಳಿಯಲ್ಲಿ ಸೇರಿಕೊಂಡರು. 1938ರ ಏಪ್ರಿಲ್ ತಿಂಗಳಲ್ಲಿ ಶಿವಪುರದಲ್ಲಿ ಕಾಂಗ್ರೆಸ್ ಅಧಿವೇಶನ ಪ್ರಾರಂಭವಾಗಿ ಅದೊಂದು ರಣರಂಗವಾಯಿತು. ಮೂರು ದಿನಗಳ ಕಾಲ ಧ್ವಜಾರೋಹಣದಲ್ಲಿ ಎಂಟು ಮಂದಿ ಮುಖಂಡರು ದಸ್ತಗಿರಿಯಾದರು. ರಾಜ್ಯದ ಎಲ್ಲೆಡೆಗಳಲ್ಲಿ ಮೇ ತಿಂಗಳಲ್ಲಿ ಪ್ರತಿಬಂಧಕಾಜ್ಞೆ ಉಲ್ಲಂಘಿಸಿದ್ದಕ್ಕಾಗಿ ರಾಮಣ್ಣನವರ ಮೊದಲ ದಸ್ತಗಿರಿ ಆಯಿತು. ಮಹಿಳೆಯರಾಗಿ ಯಶೋದಮ್ಮನವರು ಈ ಧ್ವಜ ಸತ್ಯಾಗ್ರಹದಲ್ಲಿಯೂ ಇವರ ಪಾತ್ರ ಹಿರಿದು. ಪ್ರತಿಬಂಧಕಾಜ್ಞೆಯನ್ನು ಮುರಿದು ಧ್ವಜಹಾರಿಸುವಾಗ ಅಂದಿನ ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯನವರ ದಸ್ತಗಿರಿಯಾದರು. ಎಂ.ಎನ್. ಜೋಯಿಸರು ಕಣ್ಣು ತೆಗೆಯುವುದರಲ್ಲಿ ಧ್ವಜ ಹಾರಿಸಿಬಿಟ್ಟರು. ಜೋಯಿಸರು ದಸ್ತಗಿರಿ ಆದರು. ಪೊಲೀಸರ ಮತ್ತು ಸ್ವಯಂ ಸೇವಕರ ನಡುವೆ ಘರ್ಷಣೆ ಏರ್ಪಟ್ಟಿತಲ್ಲದೆ ಧ್ವಜವನ್ನು ಕೆಳಗೆ ಬೀಳದಂತೆ ಯಶೋದಮ್ಮ ಇತರರು ರಕ್ಷಿಸಿದರು. ಹಗರಣ ಮುಗಿಯುವವರೆಗೆ ಅವರು ರಾತ್ರಿ ಎನ್ನದೆ ಧ್ವಜ ರಕ್ಷಣೆ ಮಾಡಿ ರಾಷ್ಟ್ರಗೌರವ

ಉಳಿಸಿದರು. ಯಶೋದಮ್ಮನವರ ಇಬ್ಬರು ಮಕ್ಕಳಾದ ರಾಮದಾಸ್ ಮತ್ತು ತುಳಸಿದಾಸರು ಜೊತೆಗಿದ್ದರು. ಸುಬ್ಬಮ್ಮ ಜೋಯಿಸ್‌ರು 1938ರ ಶಿವಪುರ ಅಧಿವೇಶನದಲ್ಲಿ ಸ್ವಯಂ ಸೇವಕ ಕೆಲಸ ನಿರ್ವಹಿಸಿದರು.

ಎ.ಎನ್.ಸೂರ್ಯನಾರಾಯಣರಾವ್ ಫಲಕ ಬರೆಯುವ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದರು. ಸೂರ್ಯ ನಾರಾಯಣರಾಯರು ಮನೆಯಲ್ಲಿಯೇ ತಮ್ಮ ಕೆಲಸವನ್ನು ಮುಂದುವರಿಸುತ್ತಿದ್ದರು. ಶಿವಪುರ ಮಹಾಧಿವೇಶನದ ಫಲಕಗಳು, ಅಲಂಕಾರಗಳು ಎಲ್ಲವೂ ಇವರ ಕೈಛಳಕವೇ. ಜೊತೆಗೆ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಕೆ.ಎಂ.ಶಿವಲಿಂಗಯ್ಯ 1938ರ ಶಿವಪುರ ಮಹಾಧಿವೇಶನದಲ್ಲಿ ಭಾಗವಹಿಸಿದ್ದರು, 1938ರಲ್ಲಿ ಭೀಮನಕೊಲ್ಲಿಯಲ್ಲಿ ಹೆಚ್.ಸಿ.ದಾಸಪ್ಪ, ಬಿ.ಮರಿಯಪ್ಪ, ಎಂ.ಎನ್.ಜೋಯಿಸರು ಭಾಷಣ ಮಾಡಿದರು. ಅವರ ಭಾಷಣದಿಂದ ಪ್ರಭಾವಿತರಾದರು. ಶಾಲೆಗೆ ಹೋಗುವುದನ್ನು ಬಿಟ್ಟು ಭಾರತದ ಅನೇಕ ಕ್ರಾಂತಿಕಾರಿಗಳ ಕಥೆ ಓದಿದರು. ಎನ್.ಎಸ್.ಹಾರ್ಡೀಕರ್, ಮಂಜಪ್ಪನವರ ಶರಣ ಸಂದೇಶ ಪತ್ರಿಕೆಯನ್ನು ಓದಿದರು. ಹೈದ್ರಾಬಾದ್ ಸರ್ಕಾರದಿಂದ ಕಿರುಕುಳಕ್ಕೊಳಗಾದ ಸ್ವಾಮಿ ರಮಾನಂದ ತೀರ್ಥರ ಚರಿತ್ರೆಯನ್ನು ಓದಿದ್ದರು. ಮೈಸೂರಿನಲ್ಲಿ ಬಾಬುಶರತ್‌ಚಂದ್ರ ಬೋಸರ ಅಧ್ಯಕ್ಷತೆಯಲ್ಲಿ ನಡೆದ ವಿದ್ಯಾರ್ಥಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

**ವಿದುರಾಶ್ವತ್ಥದಲ್ಲಿ ಜರುಗಿದ ದ್ವಿತೀಯ ಮೈಸೂರು ಕಾಂಗ್ರೆಸ್ 1938 ಏಪ್ರೀಲ್ 18ರಿಂದ 25ರವರೆಗೆ**

ಶಿವಪುರದ ಸತ್ಯಾಗ್ರಹ ನಡೆದ ಕೆಲ ದಿನಗಳ ಅಂತರದಲ್ಲಿ ನಡೆಯಿತು. ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ವಿದುರಾಶ್ವತ್ಥದಲ್ಲಿ ಒಂದು ಹತ್ಯಾಕಾಂಡ ನಡೆಯಿತು. ವಿದುರಾಶ್ವತ್ಥ ಒಂದು ಪವಿತ್ರ ಯಾತ್ರಾ ಸ್ಥಳ. ಉತ್ತರ ಪಿನಾಕಿನಿ ನದಿ ದಡದಲ್ಲಿದೆ. ಇಲ್ಲಿ ಪ್ರತಿ ವರ್ಷವೂ ಚೈತ್ರಶುದ್ಧ ಪೂರ್ಣಿಮೆಯ ದಿನದಂದು ಪ್ರಾರಂಭವಾಗಿ ನಡೆಯುವ ಅಶ್ವತ್ಥನಾರಾಯಣಸ್ವಾಮಿಯ ಜಾತ್ರೆ ಏಳು ದಿನಗಳು ನಡೆಯುವುದು ವಾಡಿಕೆಯಾಗಿತ್ತು. ಪರಿಣಾಮವಾಗಿ ಮೈಸೂರು ಕಾಂಗ್ರೆಸ್ ಪಕ್ಷ ಜಾತ್ರಾ ಮಹೋತ್ಸವದ ದಿನ ಕೋಲಾರ ಜಿಲ್ಲೆಯ ಕೆಲ ಕಾಂಗ್ರೆಸ್ಸಿಗರು ಟಿ.ರಾಮಾಚಾರ್ಯ ನೇತೃತ್ವದಲ್ಲಿ ಅಲ್ಲಿ ರಾಷ್ಟ್ರಧ್ವಜಾರೋಹಣವನ್ನು 1938 ಏಪ್ರೀಲ್ 18ರಂದು ಏರ್ಪಡಿಸಿದ್ದರು.ಇದನ್ನು ಗಮನಿಸಿದ ಜಿಲ್ಲಾ ನ್ಯಾಯಾಧೀಶರಾದ ಶ್ರೀಅಪ್ಪಾಜಿಗೌಡರು 1938 ಏಪ್ರೀಲ್ 15ರಂದೇ 144ನೇ ಸೆಕ್ಷನ್ ಪ್ರಕಾರ ಪ್ರತಿಬಂದಾಕಾಜ್ಞೆಯನ್ನು ವಿಧಿಸಿದರು. 37 ಜನರ ಮೀಸಲು ಪೋಲೀಸ್ ಪಡೆಯನ್ನು ನೇಮಿಸಿದರು. ಸಬ್‌ಇನ್ಸ್‌ಪೆಕ್ಟರ್ ಬಸಪ್ಪ, ಅಮಲ್ದಾರ್ ರಾಜಶೇಖರ ಒಡೆಯರ್ ಇತರರನ್ನು ನೇಮಿಸಿದರು.

ಏಪ್ರೀಲ್ 18ರಿಂದ 24ರವರೆಗೆ ಯಾವುದೇ ಅಡ್ಡಿ ಆತಂಕವಿಲ್ಲದೆ ಧ್ವಜಾಸತ್ಯಾಗ್ರಹ ನಡೆಯಿತು. ಏಪ್ರೀಲ್ 25ನೇ ತಾರೀಖು ಶಾಸನ ಉಲಂಘನೆ ಮಾಡಿದ ಕಾಂಗ್ರೆಸ್ಸಿಗರನ್ನು ಬಂಧಿಸುವುದು ಬಿಟ್ಟು ಪೋಲೀಸರು ಶಾಂತಿಯುತರು, ನಿರಾಪರಾಧಿಗಳು, ನಿರಾಯುಧರು ಆಗಿದ್ದು ತೋಪಿನಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ ಮುಗ್ಧ ಜನಗಳ ಮೇಲೆ ಲಾಠಿ ಪ್ರಹಾರ ಮಾಡಿದರು. ಜನ ಚೆಲ್ಲಾಪಿಲ್ಲಿ ಆಗಿ ಓಡಿದರು. ಯಾರೋ ಪೋಲಿಸರ ಮೇಲೆ ಕಲ್ಲೆಸೆದರು ಎಂಬ ನೆಪ ಮಾಡಿಕೊಂಡು ಜನರ ಗುಂಪಿನ ಮೇಲೆ ವಿವೇಚನೆ ಇಲ್ಲದೆ 96 ಸುತ್ತು ಗುಂಡು ಹಾರಿಸಲಾಯಿತು. ಈ ಹತ್ಯಾಕಾಂಡದಲ್ಲಿ 10ಕ್ಕಿಂತ ಹೆಚ್ಚು ಜನ ಸತ್ತರು. ಸತ್ತವರ ಪೈಕಿ

ಅಶ್ವತ್ಥವೃಕ್ಷ ಪ್ರದಕ್ಷಿಣೆ ಮಾಡುತ್ತಿದ್ದ ತುಂಬು ಗರ್ಭಿಣಿ ಗೌರಮ್ಮನವರು ಒಬ್ಬರು. ಈ ಸುದ್ದಿ ಕಾಳ್ಗಿಚ್ಚಿನಂತೆ ದೇಶದಾದ್ಯಂತ ಹರಡಿತು.

ಮೈಸೂರು ಸಂಸ್ಥಾನ ವಸ್ತುಸ್ಥಿತಿಯನ್ನು ಜನಕ್ಕೆ ತಿಳಿಸುವ ಬದಲು ವಿಶ್ವಕರ್ನಾಟಕ, ತಾಯಿನಾಡು, ಜನವಾಣಿ ಪತ್ರಿಕೆಗಳ ಪ್ರಕಟಣೆಯನ್ನೇ ಪ್ರತಿಬಂಧಿಸಿ ಅಜ್ಞೆ ಮಾಡಿತು. ಲಂಡನ್ನಿನ ಬಿ.ಬಿ.ಸಿ ಕೂಡ ಈ ದುರಂತದ ಸುದ್ದಿಯನ್ನು ಬಾನುಲಿ ಪ್ರಚಾರ ಮಾಡಿ ಸರ್ಕಾರದ ಈ ಪೈಶಾಚಿಕ ಕೃತ್ಯವನ್ನು ಖಂಡಿಸಿತು. ಈ ದಾರುಣ ವಾರ್ತೆಯನ್ನು ಕೇಳಿದ ಮಹಾತ್ಮ ಗಾಂಧಿಯವರು ಇಂತಹ ದುರ್ಘಟನೆಗಳು ನಡೆಯದಿರಲು ಪ್ರಜಾಸರ್ಕಾರ ಏರ್ಪಡಿಸುವುದೇ ದಿವ್ಯ ಔಷಧ? ಎಂದು ಹೇಳಿಕೆ ಇತ್ತರು. ಸಂಸ್ಥಾನದಾದ್ಯಂತ ಈ ಘಟನೆಯನ್ನು ಖಂಡಿಸಿ ನಿರ್ಣಯಗಳಾದವು, ಸಾರ್ವಜನಿಕ ವಿಚಾರಣೆ ನಡೆಯಬೇಕೆಂದು ಒತ್ತಾಯ ತರಲಾಯಿತು.ಸರ್ಕಾರ ಈ ದುರಂತದಿಂದ ತಲೆತಗ್ಗಿಸುವಂತೆ ಆಯಿತು. ವಿದುರಾಶ್ವತ್ಥದ ದುರ್ಘಟನೆಯ ವಿಚಾರಣೆಗೆ ವೇಪಾ ರಮೇಶ್ಂ ರವರ ಅಧ್ಯಕ್ಷತೆಯಲ್ಲಿ ಮೂವರ ವಿಚಾರಣಾ ಸಮಿತಿಯನ್ನು ಸರ್ಕಾರ ನೇಮಿಸಿತು. ಸಮಿತಿಯವರು ಕಾರ್ಯಕಲಾಪಗಳನ್ನು ನಡೆಸಿದ ಪ್ರೀತಿಯಿಂದ ಇದು ಜನರ ಕಣ್ಣೊರೆಸುವ ಒಂದು ನಾಟಕ ಎಂಬುದು ಸರ್ವವಿಧಿತವಾಯಿತು.

ಶಿವಪುರದ ಧ್ವಜಾಸತ್ಯಾಗ್ರಹ ನಡೆದ ಕೆಲವೇ ದಿನಗಳಲ್ಲಿ ವಿದುರಾಶ್ವತ್ಥ ಧ್ವಜ ಸತ್ಯಾಗ್ರಹ 1938 ಏಪ್ರಿಲ್ 25ರಂದು ನಡೆಯಿತು. ಈ ಕಾರ್ಯಕ್ರಮವು ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದು ಹೆಸರಾಗಿದೆ. ಈ ಸತ್ಯಾಗ್ರಹದಲ್ಲಿ ಮೈಸೂರಿನ ಸ್ವಾತಂತ್ರ್ಯ ಹುರಿಯಾಳಾದ ಟಿ. ರಾಜನ್ ಇವರು ಮೈಸೂರಿನ ಪನಸಾರಿ ಅಂಗಡಿಯನ್ನು ನಡೆಸುತ್ತಿದ್ದರು.

**ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ**

ಮೈಸೂರಿನಲ್ಲಿ ಹೊಸದಾಗಿ ಕಟ್ಟಲಾದ ಸೆಂಟ್ರಲ್ ಪೋಲೀಸ್ ಸ್ಟೇಷನ್ ಕಟ್ಟಡಕ್ಕೆ ಹ್ಯಾಮಿಲ್ಟನ್ ಬಿಲ್ಡಿಂಗ್ ಎಂದು ಹೆಸರಿಡಲು ಸರ್ ಮಿರ್ಜಾ ಇಸ್ಮಾಯಿಲ್ ಸೂಚಿಸಿದರು. ಮೈಸೂರಿನ ಐ.ಜಿ.ಪಿ ಹ್ಯಾಮಿಲ್ಟನ್ ಈಗಾಗಲೇ ದಬ್ಬಾಳಿಕೆಗೆ ಹೆಸರಾಗಿದ್ದರು. ತಗಡೂರು ರಾಮಚಂದ್ರರಾಯರು, ಸೂರ್ಯ ನಾರಾಯಣರಾಯರು, ಎಂ.ಎನ್.ಜೋಯಿಸರು, ಸುಬ್ಬರಾವ್ ಉಪಾಧ್ಯಾಯರು, ಹ್ಯಾಮಿಲ್ಟನ್ ಭವನದ ನಾಮಕರಣದ ವಿರುದ್ಧ ಚಳುವಳಿ ಹೂಡಲು ನಿರ್ಧರಿಸಿದರು. ಈ ಸತ್ಯಾಗ್ರಹ 15.2.1939ರಲ್ಲಿ ಆರಂಭವಾಯಿತು. ಪ್ರತಿದಿನ ಎರಡು ಗುಂಪುಗಳು ಸತ್ಯಾಗ್ರಹ ಮಾಡತಕ್ಕದ್ದು ಎಂದು ತೀರ್ಮಾನವಾಯಿತು. ಈ ಸತ್ಯಾಗ್ರಹ ಫೆಬ್ರವರಿ 15ರಿಂದ ಮಾರ್ಚ್ 31ರವರೆಗೆ ನಡೆಯಿತು. ಎಸ್.ವಿ.ಸುಬ್ಬರಾಮಯ್ಯನವರು ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹದಲ್ಲಿ ತಗಡೂರರಿಗೆ ಸಹಾಯ ಹಸ್ತ ನೀಡುತ್ತಾ ಸತ್ಯಾಗ್ರಹಕ್ಕಾಗಿ ಪೊರಕೆ, ಮಡಕೆ, ಸುಣ್ಣ ಇವುಗಳನ್ನು ಪ್ರತಿನಿತ್ಯ ಸಂಜೆ ಅಂಗಡಿಯಿಂದ ತಂದು ಕೊಡುತ್ತಿದ್ದರು.ಇವರೊಂದಿಗೆ ಎಸ್.ಎ.ಕೃಷ್ಣನ್ ಮತ್ತು ಎಂ.,ಎಸ್.ಕೃಷ್ಣಮೂರ್ತಿ ಸಹಕರಿಸುತ್ತಿದ್ದರು.

13.02.1939ನೇ ದಿನ ತಗಡೂರು ರಾಮಚಂದ್ರ ರಾಯರ ದಸ್ತಗಿರಿ ಆಯಿತು. 14 ಮತ್ತು 15ನೇ ತಾರೀಖಿನಲ್ಲಿ ಸೂರ್ಯನಾರಾಯಣರಾವ್, ಸುಬ್ಬರಾವ್ ಉಪಾಧ್ಯಾಯ, ಎಂ.ಎನ್. ಜೋಯಿಸ್ ಇವರ ಬಂಧನ ಆಯಿತು. ಜಿಲ್ಲೆಯ ಊರೂರುಗಳಿಂದ ಸತ್ಯಾಗ್ರಹಿಗಳು ಬಂದು ಭಾಗವಹಿಸಿದರು.

ಎಂ.ಶಾಮರಾವ್, ಎಂ.ಎಂ.ವೆಂಕಟಪ್ಪ, ಹೆಚ್.ಹನುಮಂತಯ್ಯ, ಚಿಕ್ಕರುದ್ರಪ್ಪ, ಬೂದಿಗೆರೆ ನಾರಾಯಣಗೌಡ, ಅರಕೆರೆ ಯು.ಕೆಂಚಯ್ಯ, ಸಾಲಿಗ್ರಾಮದ ಕೆ.ಎಸ್, ಚಕ್ರವರ್ತಿ, ಎಂ.ಪಿ ಚಂದ್ರಶೇಖರಯ್ಯ, ಪಿ.ವಿ ಕೃಷ್ಣಯ್ಯ ನಾಯ್ಡು, ರಾಮಯ್ಯ ನಾಯ್ಡು, ಎಂ.ಎಸ್ ಸುಬ್ಬೆಗೌಡ, ಎಂ.ಎಸ್ ಕೃಷ್ಣಪ್ಪಗೌಡ, ಬಿ. ಸಿದ್ದಪ್ಪಗೌಡ, ಎಂ.ಎಸ್ ಶ್ರೀಕಂಠಯ್ಯ, ಕೃಷ್ಣರಾಜನಗರದ ಸಿ.ಎಸ್.ನಾರಾಯಣಸ್ವಾಮಿ, ನಾಗಮಂಗಲ ತಾಲ್ಲೂಕು ಮಣಿಯಾರಿನ ತಿಮ್ಮೇಗೌಡ, ಚನ್ನಪಟ್ಟಣದ ಶ್ರೀಲಿಂಗೇಗೌಡ, ಜವರಪ್ಪಗೌಡ, ಎಂ.ಸಿ. ಲಿಂಗಾಚಾರ್ ಮತ್ತು ಎಸ್.ರಾಮಸ್ವಾಮಿ ಇವರೇ ಮೊದಲಾದ 70 ಜನರ ದಸ್ತಗಿರಿ ಆಯಿತು. ಅಗರಂ ರಂಗಯ್ಯನವರಿಗೆ 1939ರಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಕಾಲಿಡಕೂಡದು ಎಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ್‌ಯಿಂದ ಆದೇಶ ಬಂದಾಗ ಹೆದರದೆ ಹಾಸನ ಜಿಲ್ಲೆಯಲ್ಲಿ ಸಂಚರಿಸಿ ಕಾಂಗ್ರೆಸ್ ಪ್ರಚಾರ ಮಾಡಿದರು.

ಎ.ರಾಮಣ್ಣ ಈಗಿನ ಸೆಂಟ್ರಲ್ ಪೊಲೀಸ್ ಸ್ಟೇಷನ್‌ಗೆ ಇಟ್ಟಿದ್ದ ಹ್ಯಾಮಿಲ್ಟನ್ ಬಿಲ್ಡಿಂಗ್ ಎಂಬ ಇಂಗ್ಲೀಷ್ ಹೆಸರನ್ನು ತೆಗೆದುಹಾಕುವ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. 1939ರ ಜನವರಿಯಲ್ಲಿ ದಸ್ತಗಿರಿ ಆಗಿ ಆರು ತಿಂಗಳ ಕಾಲ ಕಠಿಣ ಶಿಕ್ಷೆ, ರೂ.500 ದಂಡ ತಪ್ಪಿದರೆ ಮತ್ತೊಂದು ತಿಂಗಳ ಶಿಕ್ಷೆಗೆ ಒಳಗಾಗಿ ಮೈಸೂರಿನಲ್ಲಿ ಶಿಕ್ಷೆ ಅನುಭವಿಸಿದರು. ಡಿ.ಎನ್.ಸೀತಾರಾಮರಾವ್.ಶ್ರಿಯುತರು ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಪಾರ್ವತಮ್ಮ ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ ನಡೆಯುತ್ತಿದ್ದಾಗ ಚಾಮುಂಡಿಪುರಂ ಬಡಾವಣೆ ಹೆಂಗಸರು ತಮ್ಮಲ್ಲಿ ಕೆಲವರಾದರೂ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಬೇಕೆಂದು ತೀರ್ಮಾನಿಸಿದರು. ಶ್ರೀಮತಿಯವರಾದ ವಿಶಾಲಾಕ್ಷಮ್ಮ ಮತ್ತು ಪಾರ್ವತಮ್ಮ ಇವರು ಸತ್ಯಾಗ್ರಹದಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸಿದರು, ಎ.ಎನ್.ಸೂರ್ಯನಾರಾಯಣರಾವ್ ಫಲಕ ಬರೆಯುವ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದರು.

**ವಾರ್ದ ಆಶ್ರಮಕ್ಕೆ ಭೇಟಿ**

ಟಿ.ಎಸ್.ಸುಬ್ಬಣ್ಣ ತಗಡೂರು ಗ್ರಾಮದವರು. ಗಾಂಧಿ ಅನುಯಾಯಿ ಆಗಿದ್ದರು ಹಾಗೂ ಚಿಕ್ಕಂದಿನಲ್ಲಿಯೇ ತಗಡೂರು ಅವರ ಪ್ರಭಾವಕ್ಕೆ ಒಳಗಾದರು. ಗಾಂಧೀಜಿ ಅವರ ಜೊತೆ ಇರಬೇಕೆಂಬ ಆಸೆ ಮೂಡಿತು. ವಾರ್ದ ಆಶ್ರಮಕ್ಕೆ ಹೋಗಿ ಕೆಲ ಕಾಲ ಇದ್ದು ಬಂದರು. ಹರಿಜನರ ಸೇವೆ, ಪಾನ ನಿರೋಧ ಮುಂತಾದ ಕಾರ್ಯಗಳಲ್ಲಿ ತೊಡಗಿದ್ದರು. ಮೈಸೂರಿನ ರಾಜಕೀಯದಲ್ಲಿ ಅವರ ಪಾತ್ರ ಬಹಳ ಅಪಾರವು ಹೌದು, ಮಹತ್ವದ್ದು ಹೌದು. ರಾಜಕೀಯದಲ್ಲಿ ಮುಂಚೂಣಿಯಲ್ಲಿದ್ದ ಅಗರಂ ರಂಗಯ್ಯನವರ ಜೊತೆ ಸೇರಿ ಆಗಿನ ಕಾಂಗ್ರೆಸ್‌ನ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಿ ಅನೇಕ ಬಾರಿ ಜೈಲು ಕಂಡರು. ಕೃಷ್ಣಮೂರ್ತಿ ನಾಡಿಗ ಅವರು ಗಾಂಧಿ ಸೇವಾ ಗ್ರಾಮಕ್ಕೆ ತೆರಳಿ ಎರಡು ತಿಂಗಳ ಕಾಲ ಅಲ್ಲಿದ್ದು ಅನುಭವ ಪಡೆದರು.

**ಚಲೇಜಾವ್ ಚಳುವಳಿ (ಕ್ವಿಟ್ ಇಂಡಿಯಾ ಚಳುವಳಿ) 1942**

1939ರಲ್ಲಿ ಆರಂಭವಾದ ದ್ವಿತೀಯ ಜಾಗತಿಕ ಮಾಹಾಯುದ್ದದಲ್ಲಿ ಭಾರತೀಯರ ಸಹಕಾರವನ್ನು ಪಡೆಯುವ ಉದ್ದೇಶದಿಂದ ಸರ್ ಸ್ಟ್ಯಾಫರ್ಡ್ ಕ್ರಿಪ್ಸರ ನಾಯಕತ್ವದಲ್ಲಿ ಒಂದು ಆಯೋಗವನ್ನು ಆಂಗ್ಲ ಸರಕಾರ ಭಾರತಕ್ಕೆ ಕಳುಹಿಸಿತು. ಭಾರತದ ನಾಯಕರು ಮತ್ತು ಕ್ರಿಪ್ಸರ ಮಾತುಕತೆಗಳು ವಿಫಲವಾದವು. ಮಹಾತ್ಮಾ ಗಾಂಧೀಜಿಯವರು 1942 ಆಗಸ್ಟ್ 8ರಂದು ಮುಂಬೈಯ ಕ್ರಾಂತಿ ಮೈಧಾನದಲ್ಲಿ ಜರುಗಿದ

ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಕ್ವಿಟ್ ಇಂಡಿಯಾ ಎಂಬ ನಿರ್ಣಯ ಅಂಗೀಕಾರವಾಯಿತು. ಗಾಂಧೀಜಿಯವರ ನಾಯಕತ್ವದಲ್ಲಿ ಕ್ವಿಟ್ ಇಂಡಿಯಾ ಚಳುವಳಿ ನಡೆಸಲು ನಿರ್ಧರಿಸಲಾಯಿತು.

ಮುಂಬೈಯ ಕ್ರಾಂತಿ ಮೈಧಾನದಲ್ಲಿ ನಡೆದ ಅಧೀವೇಶನದಲ್ಲಿ ಭಾರತ ಬಿಟ್ಟು ತೊಲಗಿ ಅಥವಾ ಕ್ವಿಟ್ ಇಂಡಿಯಾ ಚಳುವಳಿಗೆ 1942 ಆಗಸ್ಟ್ 9ರಂದು ಗಾಂಧೀಜಿಯವರು ಕರೆಯಿತ್ತರು. ನಂತರ ಗಾಂಧೀಜಿಯವರು ಮಾಡು ಇಲ್ಲವೆ ಮಡಿ ಎಂಬ ಸಂದೇಶವನ್ನು ನೀಡಿದರು, ಈ ಸಂದೇಶ ಭಾರತೀಯರಲ್ಲಿ ಸಂಚಲನವನ್ನು ಉಂಟು ಮಾಡಿತು. ಇದನ್ನು ಮನಗಂಡ ಬ್ರಿಟಿಷ್ ಸರಕಾರ ಆಗಸ್ಟ್ 8ರ ಮಧ್ಯರಾತ್ರಿಯಲೇ ಗಾಂಧೀಜಿ, ನೆಹರು, ಸರ್ಧಾರ್ ವಲ್ಲಭಾಯಿ ಪಟೇಲ್ ಮೊದಲಾದ ಎಲ್ಲಾ ರಾಷ್ಟ್ರ ನಾಯಕರನ್ನು ಬಂಧಿಸಿತು. ಭಾರತದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ಬಹಿಷ್ಕರಿಸಲಾಯಿತು.

ಗಾಂಧೀಜಿಯವರು ಕರೆಯಿತ್ತ ಮಾಡು ಇಲ್ಲವೆ ಮಡಿ ಎಂಬ ಸಂದೇಶವನ್ನು ಮೈಸೂರು ಸಂಸ್ಥಾನದ ಭೂಪ್ರದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಅಗರಂರಂಗಯ್ಯನವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ 15 ತಿಂಗಳು ಸ್ಥಾನಬದ್ಧತೆಯಲ್ಲಿ ಇರಬೇಕಾಯಿತು. ಎಂ.ಎನ್. ಜೋಯಿಸ್‌ರು ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಮನೆ ಮಠ ತೊರೆದು ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಸೇವೆ ಸಲ್ಲಿಸಿದರು. ಆರು ಬಾರಿ ಸೆರೆಮನೆವಾಸ ಅನುಭವಿಸಿದರು. ಎಚ್.ಸಿ.ದಾಸಪ್ಪ ಈ ಚಳುವಳಿಯಲ್ಲಿ ಉಗ್ರವಾಗಿ ಹೋರಾಟ ನಡೆಸಿ 18 ತಿಂಗಳುಗಳ ಕಾಲ ಸೆರೆಮನೆವಾಸ ಅನುಭವಿಸಿದರು. ವಿ.ಎಸ್.ವೆಂಕೋಬರಾವ್ ಬಾಲ್ಯದಿಂದಲೂ ಗಾಂಧಿಯವರ ಬರಹಗಳನ್ನು ಓದುತ್ತಿದ್ದರು. 1937ರಲ್ಲಿ ಮೈಸೂರು ಪುರಭವನದ ಬಳಿ ನಾರಿಮನ್ ಭಾಷಣ ಕೇಳಿ ಸ್ಫೂರ್ತಿಗೊಂಡರು. ಪಟ್ಟಾಭಿ ಸೀತರಾಮಯ್ಯ, ರಾಜಕುಮಾರಿ ಅಮೃತ್‌ಕೌರ್ ಮೊದಲಾದವರ ಭಾಷಣಗಳಿಂದ ಪುಳಕಿತರಾದರು. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಧುಮುಕಿದರು. ಯುವಕರ ಗುಂಪನ್ನು ಕಟ್ಟಿಕೊಂಡು ಬ್ರಿಟಿಷ್ ವಿರೋಧಿ ಘೋಷಣೆ ಮಾಡುತ್ತಾ ಮೈಸೂರು ಜಿಲ್ಲೆಯಾದ್ಯಂತ ಓಡಾಡಿದರು. ಪವಮಾನ, ವರಹಮೂರ್ತಿ, ನಾಗಭೂಷಣ, ನಾಗಪ್ಪ, ಕೃಷ್ಣಯ್ಯಂಗಾರ್ ಮೊದಲಾದವರು ಇದ್ದರು. ಇವರನ್ನು ಮೂಗೂರು ಬಳಿ ಪೊಲೀಸರು ಬಂಧಿಸಿದರು, ಮೈಸೂರು ಜೈಲು ಮತ್ತು ಕಬ್ಬೆಕಟ್ಟೆ ಜೈಲಿನಲ್ಲಿ ಇವರು ತುರಂಗವಾಸ ಅನುಭವಿಸಿದರು.

ಮರಿಯಪ್ಪ ವಕೀಲರು, ಎಸ್.ವಿ.ಸುಬ್ಬರಾಮಯ್ಯ ಇವರು ಸ್ವಾತಂತ್ರ ಹೋರಾಟದ ಹರಿಕಾರರೆಂದು ಪ್ರಸಿದ್ಧರಾಗಿದ್ದರು. 1927 ಮತ್ತು 1934ರಲ್ಲಿ ಮೈಸೂರಿಗೆ ಭೇಟಿ ನೀಡಿದ್ದ ಮಹಾತ್ಮಗಾಂಧಿಯವರು ಶೇಷಾದ್ರಿ ಹೌಸ್‌ನಲ್ಲಿ ತಂಗಿದ್ದರು. ತಂದೆಯವರೊಡನೆ ಮಹಾತ್ಮ ಗಾಂಧೀಜಿಯವರ ದರ್ಶನ ಪಡೆದು ಗಾಂಧಿಯವರ ಆದರ್ಶಗಳಿಗೆ ಮಾರು ಹೋದರು. ಹಿರಿಯ ಸ್ವಾತಂತ್ರ್ಯ ಸೇನಾನಿ ಶ್ರೀ.ಎಂ.ಎನ್ ಜೋಯಿಸ್ ಮತ್ತು ಸ್ವಾತಂತ್ರ್ಯ ಹೋರಾಟಗಾರ್ತಿ ಶ್ರೀಮತಿ ಸುಬ್ಬಮ್ಮ ಜೋಯಿಸ್ ಅವರ ಪ್ರಭಾವ ಬೀರಿತು. 1938, 1939, 1943ರ ಇಸವಿಗಳಲ್ಲಿ ಜರುಗಿದ ಬಹಿರಂಗ ಸಭೆಗಳಲ್ಲಿ ನೋಟಿಸ್‌ಗಳನ್ನು ಹಂಚುವುದು, ಕೆಲವು ರಸ್ತೆಗಳಲ್ಲಿ ನೋಟಿಸನ್ನು ಇಡುವುದು. ಸಭೆಗೆ ರಜನಿಕಾಂತ ದೀಪಾ ತರುವುದು, ಪ್ಲೇಕಾರ್ಡು ಹಿಡಿದು ಹೋಗುವುದು ಇವೆಲ್ಲ ಕೆಲಸ ಅವರದಾಗಿತ್ತು. 1942ರಲ್ಲಿ ಗಾಂಧೀಜಿಯವರ ಆದೇಶದಂತೆ ಬ್ರಿಟಿಷರ ವಿರುದ್ಧ ವೈಯಕ್ತಿಕ

ಸತ್ಯಾಗ್ರಹ ನಡೆಸಿದರು. ನಗರದ ಪ್ರಮುಖ ಬೀದಿಗಳಲ್ಲಿ ತಟ್ಟೆಯ ಮೇಲೆ ಬಿತ್ತಿ ಪತ್ರ ಬರೆದು ಎಸ್.ಎ.ಕೃಷ್ಣನ್ ಮತ್ತು ಎಂ.ಎನ್.ಕೃಷ್ಣಮೂರ್ತಿ ಅವರೊಡನೆ ಮೆರವಣಿಗೆ ಹೊರಟರು. ಈ ಚಳುವಳಿಯ ಸಂಧರ್ಭದಲ್ಲಿ ವಿದ್ಯಾರ್ಥಿಗಳು ಔಷಧ ಸಾಮಗ್ರಿಗಳು, ಹಣ ಮುಂತಾದುವನ್ನು ಕೂಡಿಸಿ ಮುಂಬೈಯ ಕಾಂಗ್ರೆಸ್ ಅಂಬುಲೆನ್ಸ್ ಪಡೆಗೆ ಕಳುಹಿಸಿಕೊಟ್ಟರು. ವಿದ್ಯಾರ್ಥಿ ಸುಬ್ಬರಾಮ ಈ ಕೆಲಸದಲ್ಲಿ ನಿರತನಾದಾಗ ಅವನ ದಸ್ತಗಿರಿಯಾಗಿ ಮೈಸೂರು ಜೈಲಿನಲ್ಲಿ ಇಟ್ಟರು. ಬಿಡುಗಡೆಯಾದ ನಂತರವೂ ಹೆದರದೆ ಸೇವಾಕಾರ್ಯದಲ್ಲಿ ಮುಂದುವರಿದು ಅರಕೆರೆ, ಶ್ರೀರಂಗಪಟ್ಟಣ, ಕೆ.ಆರ್‌ನಗರದ ಹೆಬ್ಬಾಳುವಿನಲ್ಲಿ ಭಾಷಣ ಮಾಡಿದರು.

ಎಂ.ಎನ್.ಭೀಮರಾವ್‌ರವರು 1942ರ ಕ್ವಿಟ್ ಇಂಡಿಯಾ ಚಳುವಳಿ ಮೈಸೂರಿನಲ್ಲಿ ಬಿರುಸಿನಿಂದ ಸಾಗುತ್ತಿತ್ತು. ಹಾರ್ಡ್‌ವಿಕ್ ಪೌಢಶಾಲೆಯ ಬಳಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಆ ಮೆರವಣಿಗೆಯಲ್ಲಿದ್ದ ರಾಮಸ್ವಾಮಿ ಪೊಲೀಸರ ಗುಂಡಿಗೆ ಬಲಿಯಾದ. ಇವರನ್ನು ಬಂಧಿಸಿ ಮೈಸೂರು ಜೈಲಿಗೆ ಕಳುಹಿಸಿದರು. ಇವರ ಕೋಣೆಯಲ್ಲಿ ಟಿ.ಎಸ್.ಸುಬ್ಬಣ್ಣ, ಕೆ.ಬಿ.ಶಿವಯ್ಯ, ಮೊದಲಾದವರಿದ್ದರು. ಗಲಾಟೆ ಮಾಡಿದ ಸತ್ಯಾಗ್ರಹಿಗಳಿಗೆ ಛಡಿ ಶಿಕ್ಷೆ ಕೊಡಲು ತಂದಿಟ್ಟಿದ್ದ ತಿಕಡಿ ಮತ್ತು ಛಡಿಯನ್ನು ಇವರು ಜೈಲಿನಲ್ಲಿ ಸುಟ್ಟುಹಾಕಿದರು. ಹೀಗೆ ಜೈಲಿನಲ್ಲಿ ಆಗಾಗೆ ಗಲಾಟೆ ನಡೆಯುತ್ತಿತ್ತು. ಈ ಗಲಾಟೆ ನಡೆಯಲು ಹೊರಗಿನಿಂದ ಪೊಲೀಸರನ್ನು ಕರೆಸಿ ಸತ್ಯಾಗ್ರಹಿಗಳನ್ನು ಥಳಿಸಿದರು. ಈ ಸಂದರ್ಭದಲ್ಲಿ ಶಂಕರಪ್ಪ ಎಂಬ ವಿದ್ಯಾರ್ಥಿ ಮರಣವನ್ನಪ್ಪಿದನು ಎಂದು ಮಾಹಿತಿ ನೀಡಿದ್ದಾರೆ.

ಜಿ.ಎಲ್.ಎನ್.ಅಯ್ಯಾ ಗಾಂಧೀಜಿಯವರು 1942ರ ಆಗಸ್ಟ್ 9ರಂದು ಸಮಗ್ರ ರಾಷ್ಟ್ರಕ್ಕೆ ಕ್ವಿಟ್ ಇಂಡಿಯಾ ಚಳವಳಿಗೆ ಕರೆಕೊಟ್ಟಾಗ ನಾನು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದೇನು. ತಂದೆಯವರು 28.8.1942ರಂದು ಮನೆ ಬಿಟ್ಟು ಹೋಗಬೇಡವೆಂದರು. ಮನಸಿದ್ದರೆ ಮಾರ್ಗವೆಂಬಂತೆ ತಂದೆಯವರ ಕಣ್ಣುತಪ್ಪಿಸಿ ಹಿತ್ತಲ ಕಡೆಯ ಸಾಕಷ್ಟು ಎತ್ತರವಾಗಿದ್ದ ಕಾಂಪೌಂಡನ್ನು ಹಾರಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಅಶೋಕ ರೋಡಿನ ಅಂದಿನ ಕುಪ್ರಸಿದ್ಧ ಹ್ಯಾಮಿಲ್ಟನ್ ಕಟ್ಟಡದ ಮುಂದೆ ಬಂದಾಗ ಪೊಲೀಸರು ನಮ್ಮನ್ನು ವಶಕ್ಕೆ ತೆಗೆದುಕೊಂಡರು. ದಸ್ತಗಿರಿ ಮಾಡಿ ಪೊಲೀಸ್ ಗಾಡಿಯಲ್ಲಿ ಜೈಲಿಗೆ ಕರೆದುಕೊಂಡು ಹೋದರು. ನಂತರ 1942 ಚಳುವಳಿಯಲ್ಲಿ ಮೈಸೂರಿನಲ್ಲಿ ಪ್ರಪ್ರಥಮವಾಗಿ ದಸ್ತುಗಿರಿಯಾದ ವಿದ್ಯಾರ್ಥಿ ನೆನಪು. ಅಂದಿನಿಂದ ದಸ್ತಗಿರಿಗಳ ಸುರಿಮಳೆ ಜೈಲಿಗೆ ಬರುತ್ತಿದ್ದ ತಂಡವನ್ನು ಎದುರುಗೊಳ್ಳುವ ಸಡಗರ, ನಾಲ್ಕುಗೋಡೆಗಳ ಪರಿಚಯ, ಜೈಲಿನಲ್ಲೂ ಸಾಂಸ್ಕೃತಿಕ ಚಟುವಟಿಕೆಗಳು ರಾಮಾಯಣ ಮತ್ತು ಮಹಾಭಾರತಗಳ ನಾಟಕ ಎಚ್.ವೈ.ಶಾರದಾಪ್ರಸಾದ್ ನಮ್ಮ ಜೊತೆಗೆ ಬಂದ ಬಳಿಕ ನಮ್ಮ ಚಟುವಟಿಕೆಗಳಿಗೆ ಮತ್ತಷ್ಟು ಹುರುಪು ಸುಮಧುರ ಕಂಠದಿಂದ ಹೇಳಿಕೊಡುತ್ತಿದ್ದ ರಾಷ್ಟ್ರಗೀತೆಗಳು, ಭಕ್ತಿಗೀತೆಗಳು ಇಂದು ಸ್ಮರಿಸಿಕೊಂಡರೆ ರೋಮಾಂಚನ. ಗುಂಪು ಗುಂಪಾಗಿ ಸೇರಿ ಘೋಷಣೆಗಳನ್ನು ಕೂಗಲಾರಂಭಿಸಿದೆವು. ಜೈಲಿನ ಕೊಠಡಿಯ ಮುಂದಿದ್ದ ಮರವೇರಿ ಹೊರಗಿನ ವಿದ್ಯಾಮಾನಗಳನ್ನು ಮತ್ತಷ್ಟು ಚೆನ್ನಾಗಿ ನೋಡಲು ಕೊಂಬೆಯಿಂದ ಕೊಂಬೆಗೆ ಬದಲಾಯಿಸುತ್ತಿದ್ದರು. ಆಯತಪ್ಪಿ ಬಿದ್ದು ಎಚ್ಚರವಾದಾಗ ಆಸ್ಪತ್ರೆಯಲ್ಲಿದ್ದೆ, ಎಡಗೈ ಮುರಿದಿತ್ತು, ಅಂದು ರಾತ್ರಿ ತಿಳಿದು ಬಂತು, ನಾನು ವೀಕ್ಷಿಸಿದ ಸನ್ನಿವೇಶಕ್ಕೆ ತಿರುಗಿದ ಪೊಲೀಸರು ಲಾಠಿ

ಪ್ರಹಾರ ಮಾಡಿದರು. ಪೊಲೀಸರ ದೌರ್ಜನ್ಯಕ್ಕೆ ನಮ್ಮ ಸಹ ಕಾರ್ಯಕರ್ತ ಶಂಕರ ಸತ್ತನೆಂದು ತಿಳಿದು ದುಃಖ ತುಂಬಿ ಬಂದು ರಾತ್ರಿಯೆಲ್ಲಾ ಹತ್ತಿದ್ದಾಯಿತು.

ಎ.ರಾಮಣ್ಣ 1942ರಲ್ಲಿ ಬ್ರಿಟಿಷರೇ ಭಾರತ ಬಿಟ್ಟು ಹೊರಡಿ ಎಂಬ ಚಳುವಳಿಯಲ್ಲಿ ಆಗಸ್ಟ್ 12ರಲ್ಲಿ ದಸ್ತಗಿರಿಯಾಗಿ ಮೈಸೂರು, ಬೆಂಗಳೂರು, ಶ್ರೀರಂಗಪಟ್ಟಣ, ಕೆಬ್ಬೆಗಟ್ಟೆ ಮುಂತಾದ ಜೈಲಿನಲ್ಲಿ ಸುಮಾರು 16 ತಿಂಗಳುಗಳ ಕಾಲ ಸ್ಥಾನ ಭದ್ರತೆಯಲ್ಲಿ ಇದ್ದರು. ಎಚ್.ವೈ.ಶಾರದಾಪ್ರಸಾದ್ ಮೈಸೂರಿನವರು 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ 1943ನೇ ತಿಂಗಳವರೆಗೆ ಬೆಂಗಳೂರು ಸೆರೆಮನೆಯಲ್ಲಿ ಬಂದಿಯಾದರು. ಆರ್.ಟಿ.ಗುರುಕಾರ್ ಮೈಸೂರಿನವರು, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಾವಿರಾರು ವಿದ್ಯಾರ್ಥಿಗಳ ಜೊತೆಯಲ್ಲಿ ಪಾಲ್ಗೊಂಡಿದ್ದರು, ಮುಖಂಡರಾಗಿ ಟಿ.ಸ್.ಸುಬ್ಬಣ್ಣ, ಕೃಷ್ಣಪ್ಪ, ಶಾರದಾಪ್ರಸಾದ್ ಮೊದಲಾದವರು ಇದ್ದರು.

ಡಿ.ಎನ್.ಸೀತಾರಾಮರಾವ್.ಶ್ರಿಯುತರು ಹುಟ್ಟಿದ್ದು, ಶಿವಮೊಗ್ಗ ಜಿಲ್ಲೆಯ ಸೂಳ್ಯದಲ್ಲಿ ಇವರ ಶಾಲೆಗೆ ಮಹಾತ್ಮಗಾಂಧಿಯವರು ಭೇಟಿ ನೀಡಿದಾಗ ಪ್ರೇರಿತರಾದರು. 1930ರಲ್ಲಿ ಮೈಸೂರಿಗೆ ಬಂದರು. ಹಲವಾರು ಕಾಂಗ್ರೆಸ್ ನಾಯಕರ ನಿಕಟ ಸಂಬಂಧ ಬೆಳೆದು ಕ್ವಿಟ್ಇಂಡಿಯಾ ಚಳವಳಿಯಲ್ಲಿ ಪಾಲ್ಗೊಂಡಿದ್ದರು. 1942ರ ಚಳುವಳಿಯಲ್ಲಿ ವಿದ್ಯಾರ್ಥಿಗಳ ಮತ್ತು ಕಾರ್ಮಿಕರ ಪಾತ್ರ ಮಹತ್ವದ್ದಾಗಿತ್ತು. ಅವರೊಡನೆ ಲಿಂಗಪ್ಪನವರು ಸೇರಿಕೊಂಡರು. ಎಚ್.ಕೆ.ತಿಮ್ಮಯ್ಯ ಈ ಚಳುವಳಿಯಲ್ಲಿ ಪಾಲ್ಗೊಂಡಿದ್ದರು, ಇವರನ್ನು ಮತ್ತು ಸ್ನೇಹಿತರನ್ನು ಪೊಲೀಸರು ಬಂಧಿಸಿ ಮೈಸೂರು ಜೈಲಿಗೆ ಕಳಿಸಿದರು. ಬಿ.ನಾರಾಯಣಸ್ವಾಮಿ, ವಕೀಲರು 1942ರ ಚಳುವಳಿಯಲ್ಲಿ ಸಕ್ರಿಯ ಪಾತ್ರವಹಿಸಿದ್ದಕ್ಕಾಗಿ 18 ತಿಂಗಳುಗಳ ಕಾಲ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಕಾರಾಗೃಹವಾಸ ಅನುಭವಿಸಿದರು. ಪಿ. ಗೋಪಾಲಕೃಷ್ಣ ಶೆಟ್ಟಿ ಇವರು ಮೈಸೂರಿನಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದರು. ಈ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಟಿ.ರಾಜನ್ ಇವರು ಮೈಸೂರಿನ ಪಾನಸುಪಾರಿ ಅಂಗಡಿಯನ್ನು ನಡೆಸುತ್ತಿದ್ದರು. 1942ರ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಸೆರೆಮನೆವಾಸ ಲಭ್ಯವಾಯಿತು.

ಟಿ.ಎಸ್.ಸುಬ್ಬಣ್ಣನವರು 1942ರ ಚಲೇಜಾವ್ ಚಳುವಳಿಯಲ್ಲಿ ಭೂಗತರಾಗಿದ್ದು ಕೊಂಡೇ. ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿದ ಸಂದರ್ಭಗಳನ್ನು ಯಾರೂ ಮರೆಯುವಂತಿಲ್ಲ. ವಿದ್ಯೆಯಿಲ್ಲದವನು ಪಶು ಸಮಾನ ಎಂಬುದನ್ನು ಅರಿತಿದ್ದ ಸುಬ್ಬಣ್ಣನವರು ಹಳ್ಳಿಗಳಲ್ಲಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದರು. ಜಾತ್ಯತೀತ ಸಮಾಜದಲ್ಲಿ ನಂಬಿಕೆ ಇದ್ದ ಸುಬ್ಬಣ್ಣನವರು ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಸಾಪಿಸಿದರು. ಕೃಷ್ಣಮೂರ್ತಿ ನಾಡಿಗ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಶಾರದಾಪ್ರಸಾದ್, ಕುಮಾರಸ್ವಾಮಿ, ಅಬ್ದುಲ್ ಗಫಾರ್ ಮೊದಲಾದವರ ಜೊತೆ ಸೇರಿ ಚಳುವಳಿಯ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲು ಕಾರಣರಾದರು. ಸೆರೆಮನೆವಾಸ ಅನುಭವಿಸಿದರು. ಟಿ.ಎಲ್.ವಾಸುದೇವಮೂರ್ತಿ ಉಪಾಧ್ಯಾಯರಾಗಿದ್ದರು. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. ಜಾಥದ ಸಂದರ್ಭದಲ್ಲಿ ಪೊಲೀಸರು ದಸ್ತಗಿರಿ ಮಾಡಿದರು. ಮೂರು ತಿಂಗಳ ತುರಂಗವಾಸ ಅನುಭವಿಸಿದರು. ಜೆ.ಸಿ.ಚಂದ್ರಶೇಖರ ಆರಾಧ್ಯ ಇವರು 1942ರ ಚಳುವಳಿಯಲ್ಲಿ ಭಾಗವಹಿಸಲು ಉಪಾಧ್ಯಾಯರಾಗಿದ್ದು, ವೃತ್ತಿಗೆ ರಾಜೀನಾಮೆ ನೀಡಿ ಸ್ವಾತಂತ್ರ್ಯ

ಸಂಗ್ರಾಮದಲ್ಲಿ ಪಾಲ್ಗೊಂಡರು. ಎ.ಎನ್.ಸೂರ್ಯನಾರಾಯಣರಾವ್ ಫಲಕ ಬರೆಯುವ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದರು.

**ಈಸೂರು ಧ್ವಜ ಸತ್ಯಾಗ್ರಹ**

ಈಸೂರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರಕ್ಕೆ ಸೇರಿದ ಸಂಪದ್ಭರಿತವಾದ ಗ್ರಾಮ. ಅಲ್ಲಿಯೂ ಸ್ವಾತಂತ್ರ್ಯದ ಹೋರಾಟ 1942ರ ಸೆಪ್ಟೆಂಬರ್ 26ರಂದು ಸಣ್ಣ ಪ್ರಮಾಣದಲ್ಲಿ ಆರಂಭವಾಯಿತು. ಊರಿನ ಬಾಲಕರು, ವಿದ್ಯಾರ್ಥಿಗಳು ಗಾಂಧಿ ಟೋಪಿ ಧರಿಸಿಕೊಂಡು ರಾಷ್ಟ್ರಧ್ವಜವನ್ನು ಕೈಯಲ್ಲಿ ಹಿಡಿದು ಅಧಿಕಾರಿಗಳನ್ನು ರಾಜಿನಾಮೆ ಕೊಡಿ ಎಂದು ಕೇಳುತ್ತಾ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ನಡೆಸುತ್ತಿದ್ದರು. ಗ್ರಾಮದ ಪಟೇಲರನ್ನು ಸುತ್ತುಗಟ್ಟಿ ರಾಜೀನಾಮೆ ನೀಡುವಂತೆ ಒತ್ತಾಯ ಮಾಡಿದರು. ಹುಡುಗರು, ಗ್ರಾಮಸ್ಥರು ಪಟೇಲರಿಂದ ದಫ್ತರ ಕಿತ್ತುಕೊಂಡರು. ಸೆಪ್ಟೆಂಬರ್ 28ನೇ ತಾರೀಖು ಹತಾತ್ತನೆ ಅಮಲ್ದಾರರು, ಪೊಲೀಸ್ ಇನ್ಸ್‌ಸ್ಪೆಕ್ಟರ್ ಈಸೂರಿಗೆ ಬಂದರು. ಅವರನ್ನು ಸಹ ಊರಿನ ಜನರು, ವಿದ್ಯಾರ್ಥಿಗಳು ಮುತ್ತಿಗೆ ಹಾಕಿ ಕೆಲಸಕ್ಕೆ ರಾಜೀನಾಮೆ ಕೊಡಲಿ ಎಂದು ಒತ್ತಾಯ ಮಾಡಿದರು. ಹ್ಯಾಟುಗಳನ್ನು ಕಿತ್ತುಕೊಂಡು ಗಾಂಧಿ ಟೋಪಿಗಳನ್ನು ಕೊಟ್ಟರು. ಅಧಿಕಾರಿಗಳು ಕೋಪಗೊಂಡು ಜನರ ಗುಂಪಿನ ಮೇಲೆ ಗುಂಡು ಹಾರಿಸಿದರು. ಇದರಿಂದ ನಾಲ್ಕು ಮಂದಿಗೆ ಗಾಯಗಳಾದವು, ಜನ ರೊಚ್ಚಿಗೆದ್ದು ಅಧಿಕಾರಿಗಳ ಹಿಂಸಾಕೃತ್ಯವನ್ನು ಹಿಂಸೆಯ ಮೂಲಕವೇ ಎದುರಿಸಿದರು. ಈ ಹೋರಾಟದಲ್ಲಿ ಅಮಲ್ದಾರ್ ಚೆನ್ನಕೃಷ್ಣಯ್ಯ, ಸಬ್‌ಇನ್‌ಸ್ಪೆಕ್ಟರ್ ಕೆಂಚೇಗೌಡ ಇವರ ಸಾವಾಯಿತು.

ಈ ಸುದ್ದಿ ಜಿಲ್ಲಾಕೇಂದ್ರಕ್ಕೆ ವರದಿಯಾಯಿತು.ಜಿಲ್ಲಾಧಿಕಾರಿಗಳು, ವಿಶೇಷ ಪೊಲೀಸ್ ಪಡೆ ಮೈಸೂರಿಗೆ ಧಾವಿಸಿತು. ಈಸೂರಿನ ಜನ ಪೊಲೀಸರು ಬಂದೊಡನೆ ಭಯಭೀತರಾದರು. ಮನೆಗಳಿಗೆ ಬೀಗ ಹಾಕಿಕೊಂಡು ರಾತ್ರೋರಾತ್ರಿ ಮಕ್ಕಳು ಮರಿ ಕಟ್ಟಿಕೊಂಡು ಹತ್ತಿರದ ಅರಣ್ಯದೊಳಗೆ ಬಿದ್ದು ಓಡಿದರು. ಪೊಲೀಸರು ರಾತ್ರಿಯೆಲ್ಲಾ ಅರಣ್ಯದ ಭೂಭಾಗವನ್ನು ಹುಡುಕಿದರು, ಸಿಕ್ಕಿದ ಗಂಡಸರು–ಹುಡುಗರು, ಮಕ್ಕಳನ್ನು ಬಡಿದು ಹಾಕಿದರು. ಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳನ್ನು ಥಳಿಸಿ ಅಮಾನುಷ ರೀತಿಯಲ್ಲಿ ಮಾನಭಂಗ ಮಾಡಿದರು. ಪೊಲೀಸರು ಶ್ರೀಮಂತರ ಮನೆಗಳ ಬೀಗ ಒಡೆದು ಸಿಕ್ಕಿದ ಒಡವೆ, ವಸ್ತ್ರ, ಹಣಕಾಸುಗಳನ್ನು ದೋಚಿದರು. ಕೆಲವು ಮನೆಗಳಿಗೆ ಬೆಂಕಿ ಹಾಕಿ ಸುಟ್ಟರು. ಕೈಗೆ ಸಿಕ್ಕಿದವರನ್ನು ದಸ್ತಗಿರಿ ಮಾಡಿದರು. 41 ಮಂದಿಯ ಮೇಲೆ ದೊಂಬಿ, ಕೊಲೆ ಮೊಕದ್ದಮೆ ಹೂಡಲಾಯಿತು. ವಿಚಾರಣೆಗೆ ನೇಮಿತನಾದ ಸುಂದರರಾಜಾರಾಯರು ವಿಚಾರಣೆ ನಡೆಸಿ ತೀರ್ಪು ನೀಡಿದರು. 11 ಮಂದಿಗೆ ಮರಣದಂಡನೆಯನ್ನು, ಅನೇಕರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿದರು. ಹೈಕೋರ್ಟಿಗೆ ಅಪೀಲು ಹಾಕಿಕೊಂಡಿದ್ದ ಗುರಪ್ಪ, ಮಲ್ಲಪ್ಪ, ಸೂರ್ಯನಾರಾಯಣಚಾರಿ, ಹಾಲಪ್ಪ, ಶಂಕರಪ್ಪ ಎಂಬುವರಿಗೆ ಮರಣದಂಡನೆ ಖಾಯಂ ಆಯಿತು. 28 ಮಂದಿಗೆ ಜೀವಾವಧಿ ಶಿಕ್ಷೆ ಖಾಯಂಗೊಳಿಸಿದರು.

ಮರಣದಂಡನೆಗೆ ಒಳಗಾದವರಿಗೆ ಪ್ರಾಣಭಿಕ್ಷೆ ನೀಡಬೇಕೆಂದು ಸಹಸ್ರಾರು ಮಂದಿ ಮಹಾಜನರು ಮಹಾರಾಜರಿಗೆ ಮನವಿ ಮಾಡಿಕೊಂಡರು. ಅದರಿಂದ ಏನು ಫಲ ದೊರೆಯಲಿಲ್ಲ. ದಿನಕ್ಕೆ ಇಬ್ಬರಂತೆ ಮೂರು ದಿನಗಳಲ್ಲಿ ಐದು ಮಂದಿಯನ್ನು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಈ

ಮೂರು ದಿನ ಅನೇಕ ರಾಜಕೀಯ ಕೈದಿಗಳು ದುಃಖದಿಂದ ಉಪವಾಸ, ಪ್ರಾರ್ಥನೆಗಳಲ್ಲಿ ತೊಡಗಿದ್ದರು. ಅವರು ಭಾರತ ಮಾತಾ ಕೀ ಜೈ ಎಂದು ಜೈಕಾರ ಮಾಡುತ್ತಾ ತಮ್ಮ ಪ್ರಾಣಗಳನ್ನು ಭಾರತಾಂಬೆಯ ಪಾದಾರವಿಂದಗಳಲ್ಲಿ ಅರ್ಪಿಸಿದರು. ಅಜೀವ ಶಿಕ್ಷೆಗೆ ಗುರಿಯಾದವರ ಪೈಕಿ ಹಾಲಮ್ಮ, ಪಾರ್ವತಮ್ಮ ಎಂಬ ಇಬ್ಬರು ಹೆಂಗಸರು ಆಗ ಕೇವಲ 14 ವಯಸ್ಸಿನವರಾಗಿದ್ದು, ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದ ಲಿಂಗಪ್ಪ, ದುರ್ಗಜಿ ಎಂಬ ಬಾಲಕರು ಇದ್ದರು. ಜನತೆ ಮತ್ತು ಅಧಿಕಾರಿಗಳ ಮಧ್ಯೆ ಸಂಭವಿಸುವ ವಿರಸ ವಿಪರೀತಕ್ಕೆ ಹೋದರೆ ಏನೆಲ್ಲಾ ಅನರ್ಥಗಳು ಸಂಭವಿಸುವುವು ಎಂಬ ಎಚ್ಚರಿಕೆಯ ಪಾಠವನ್ನು ಈ ಘಟನೆ ಪ್ರಜೆಗಳಿಗೂ, ಸರ್ಕಾರಕ್ಕೂ ಮನನ ಮಾಡಿಕೊಟ್ಟಿತು.

**ಮೈಸೂರು ಚಲೋ ಚಳುವಳಿ (ಮೈಸೂರು ಅರಮನೆ ಚಳುವಳಿ) 1947**

1947 ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯ ಪಡೆಯಿತು.ಮಹಾರಾಜ ಜಯಚಾಮರಾಜ ಒಡೆಯರು ವಿಲೀನ ಪತ್ರಕ್ಕೆ ಸಹಿ ಹಾಕಿ ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರಿಸಿದರು. ಆದರೆ ಮೈಸೂರಿನ ಜನತೆಗೆ ಪ್ರಜಾಪ್ರಭುತ್ವಯುಕ್ತ ಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಮೈಸೂರು ಚಲೋ ಚಳುವಳಿಯನ್ನು ಸೆಪ್ಟಂಬರ್ 3, 1947ರಂದು ಬೆಂಗಳೂರಿನ ಬನಪ್ಪಪಾರ್ಕಿನಲ್ಲಿ ಕೆ.ಸಿ.ರೆಡ್ಡಿ ನಾಯಕತ್ವದಡಿಯಲ್ಲಿ ಸತ್ಯಾಗ್ರಹವನ್ನು ಆರಂಭಿಸಿತು. ಇದರಲ್ಲಿ ಬಳ್ಳಾರಿ ಸಿದ್ದಮ್ಮ, ಹೆಚ್.ಸಿ.ದಾಸಪ್ಪ, ಗೌರಮ್ಮ, ಯಶೋಧರ ದಾಸಪ್ಪ, ಮರಿಯಪ್ಪ, ಚನ್ನಪ್ಪ, ಟಿ.ಸಿದ್ದಲಿಂಗಯ್ಯ, ಮತ್ತಿತರ ಗಣ್ಯರು ಭಾಗವಹಿಸಿದ್ದರು. ಸೆಪ್ಟಂಬರ್ 3ರಂದು ಎಲ್ಲಾ ರಾಷ್ಟ್ರನಾಯಕರನ್ನು ಬಂಧಿಸಿದರು. ಮೈಸೂರು ಸಂಸ್ಥಾನದಾದ್ಯಂತ ಸಭೆಗಳು ನಡೆದು ಸತ್ಯಾಗ್ರಹಿಗಳು ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮತ್ತು ತಂಬೂಚೆಟ್ಟಿಯವರ ವಿರುದ್ದ ಆರ್ಕಾಟ್ ಬಾಯ್ಕಾಟ್, ತಂಬೂಚೆಟ್ಟಿ ಚಟ್ಟಕಟ್ಟಿ ಎಂದು ಘೋಷಣೆಗಳನ್ನು ಕೂಗಿದರು.

ಆರ್.ಕೃಷ್ಣಮೂರ್ತಿ ನೇತೃತ್ವದಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರವೂ ಮೈಸೂರು ಸಂಸ್ಥಾನದಲ್ಲಿ ರಾಜರ ಆಳ್ವಿಕೆ ಮುಂದುವರೆದಿತ್ತು ಅದನ್ನು ವಿರೋಧಿಸಿ ಚಳುವಳಿ ಆರಂಭಿಸಿದರು. ಮೈಸೂರು ಆಗೊಂದು ಕುರುಕ್ಷೇತ್ರವೇ ಆಗಿತ್ತು, ಈ ಸಂದರ್ಭದಲ್ಲಿ ರಾಮಸ್ವಾಮಿ ಅವರ ಸ್ನೇಹಿತರುಗಳಾದ ಕೃಷ್ಣಪ್ಪ ಮೊದಲಾದವರು ಚಳುವಳಿಯಲ್ಲಿ ಪಾಲ್ಗೊಂಡರು, ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ತಗಡೂರರು ತಗಡೂರುಗಾಂಧಿಯೆಂದು ಹೆಸರಾದ ತಗಡೂರು ರಾಮಚಂದ್ರರಾಯರು ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಪ್ರಚಾರ ಭಾಷಣ ಮಾಡುತ್ತಾ ರಾಯರು ಮೈಸೂರು ಸಂಸ್ಥಾನವನವೆಲ್ಲ ತಿರುಗಿದರು. ರಾಯರು ದೇಶದ್ರೋಹದ ಆಪಾದನೆಯನ್ನು ಎದುರಿಸಬೇಕಾಯಿತು. ನಾಲ್ಕಾರು ಬಾರಿ ಜೈಲುವಾಸ ಅನುಭವಿಸಿದರು.

1947ರಲ್ಲಿ ಅಗರಂ ರಂಗಯ್ಯನವರು ಅರಮನೆ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಜೈಲು ಶಿಕ್ಷೆಯಾಯಿತು. ಮರಿಯಪ್ಪ, ವಕೀಲರು ಜೈಲುವಾಸ ಅನುಭವಿಸಿದರು. ಎಂ.ಎನ್.ಜೋಯಿಸ್‌ರು ಮೈಸೂರು ಚಲೋ ಚಳುವಳಿ ಈ ಸಂದರ್ಭದಲ್ಲಿ ಮನೆ ಮಠ ತೊರೆದು ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಸೇವೆ ಸಲ್ಲಿಸಿದರು.ಆರು ಬಾರಿ ಸೆರೆಮನೆವಾಸ ಅನುಭವಿಸಿದರು. ಶ್ರೀಅನಂತಮೂರ್ತಿಯವರು 1947 ಸೆಪ್ಟೆಂಬರ್ 5 ಮೈಸೂರು ಚಲೋ ಚಳುವಳಿಯಲ್ಲಿ, ಹಾರ್ಡ್‌ವಿಕ್ ಶಾಲೆಯ ವಿದ್ಯಾರ್ಥಿ ರಾಮಸ್ವಾಮಿ ಗುಂಡಿಗೆ ಬಲಿಯಾದ ಕೂಡಲೇ ಮೈಸೂರಿನಾದ್ಯಂತ ಚಳುವಳಿ ಪ್ರಾರಂಭವಾಯಿತು. ಸೆಪ್ಟೆಂಬರ್ 7ನೇ ತಾರೀಕು ನಮ್ಮ

ನಾಯಕರ ದಸ್ತಗಿರಿ ಆಯಿತು. ಹೆಂಡದ ಅಂಗಡಿಯ ಹತ್ತಿರ ಎಚ್.ಕೆ.ನರಸಯ್ಯನವರ ನೇತೃತ್ವದಲ್ಲಿ ಪಿಕೆಟಿಂಗ್ ನಡೆಸಿದೆವು. ನಾನು ದಸ್ತಗಿರಿಯಾಗಿ ಮೈಸೂರು ಜೈಲಿನಲ್ಲಿ ಇದ್ದೆ, ನಮ್ಮ ಮೇಲೆ ಐಪಿಸಿ 183, 182 ನರಿತ್ಯ ಮೊಕದ್ದಮೆ ಹೂಡಿದ್ದರು. 1947ನೇ ಅಕ್ಟೋಬರ್ 14ನೇ (ಹದಿನಾಲ್ಕನೇ) ದಿವಸ ಎಲ್ಲಾ ರಾಜಕೀಯ ಬಂದಿಗಳ ಬಿಡುಗಡೆಯಾಯಿತು ಎಂದು ಅವರ ಲೇಖನದಲ್ಲಿ ಬರೆದಿದ್ದಾರೆ.

ಬಿ.ಆರ್.ಪ್ರಾಣೇಶರಾವ್‌ರವರು 1947ರಲ್ಲಿ ಹಲವು ಭಾರಿ ಮೈಸೂರು ಅರಮನೆ ಚಳುವಳಿಯಲ್ಲಿ ಭಾಗವಹಿಸಿದ್ದರು ನಂತರ ಜೈಲುವಾಸ ಅನುಭವಿಸಿದರು, ಎ. ರಾಮಣ್ಣ 1947ರಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಮೈಸೂರು ಚಲೋ ಚಳುವಳಿಯಲ್ಲಿ ಸರಿಯಾಗಿ 42 ದಿನಗಳ ಕಾಲ ಮೈಸೂರು ಮತ್ತು ಶಿವಮೊಗ್ಗ ಜೈಲಿನಲ್ಲಿ ಇದ್ದರು. ಡಿ.ಎನ್.ಸೀತಾರಾಮರಾವ್, ಆರ್.ಟಿ.ಗುರುಕಾರ್ 1947ರ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದರು.

ಸುಬ್ಬಮ್ಮ ಜೋಯಿಸ್‌ರು 1947ರ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಹಿಂದೂಪುರ, ಹುಬ್ಬಳ್ಳಿ ಮತ್ತು ಮದ್ರಾಸಿನಲ್ಲಿ ಅಚ್ಚಾಗುತ್ತಿದ್ದ ಕರಪತ್ರಗಳನ್ನು ಗುಪ್ತ ರೀತಿಯಲ್ಲಿ ಪಡೆದು ಅವುಗಳನ್ನು ಹಂಚುವುದು ಇವರ ಪಾಲಿನ ಕೆಲಸವಾಗಿತ್ತು. ಮೈಸೂರಿನ ಟಿ.ಪಿ ಬಾಲಾಜಿಯವರು ಲಾರಿ ಮತ್ತು ಬಸ್ ಮಾಲೀಕರು ಇವರು ಮೈಸೂರು–ಮಡಿಕೇರಿಗಳ ನಡುವೆ ಓಡಾಡುತ್ತಿದ್ದ ಅವರ ಲಾರಿ. ಬಸ್ಸುಗಳ ಮೂಲಕ ಭಿತ್ತಿಪತ್ರಗಳನ್ನು ರವಾನೆ ಆಗುತ್ತಿತ್ತು, 1930 ರಿಂದ 1947ರವರೆಗೆ ಸಾವಿರಾರು ಜನರು ಸೇರಿದ, ನೂರಾರು ಸಭೆಗಳಲ್ಲಿ ಸುಬ್ಬಮ್ಮನವರು ಭಾಷಣ ಮಾಡಿದ್ದಾರೆ, ಮೆರವಣಿಗೆಗಳಲ್ಲಿ ಪಾಲ್ಗೊಂಡಿದ್ದಾರೆ, ಗಂಡ, ಮಕ್ಕಳು, ಮನೆ, ಮತ ಎಲ್ಲವನ್ನು ಮರೆತು ಸ್ವಾತಂತ್ರ ಸಮರದಲ್ಲಿ ದುಮುಕಿ ತಮ್ಮ ಪಾಲಿನ ಸೇವೆ ಸಲ್ಲಿಸಿದ್ದಾರೆ.

ಟಿ.ನರಸೀಪುರದ ಪುಟ್ಟಮಲ್ಲದೇವರು ಟಿ.ನರಸೀಪುರದವರು, ಕೃಷಿಕರಾದ ಇವರು ತಗಡೂರು ರಾಮಚಂದ್ರರಾಯರು, ಎಂ.ಎಂ. ಜೋಯಿಸ್ ಮೊದಲಾದವರ ಟಿ. ನರಸೀಪುರ ಕಾಂಗ್ರೆಸ್ ಪ್ರಚಾರ ಭಾಷಣಕ್ಕೆ ಹೋಗಿದ್ದರು, ಅವರ ಭಾಷಣಗಳನ್ನು ಕೇಳಿದ ಇವರು ಕಾಂಗ್ರೆಸ್ಸಿನಿಂದ ರೈತರು ಉದ್ಧಾರವಾಗುತ್ತಾರೆ, ಹಳ್ಳಿ ಅಭಿವೃದ್ಧಿಯಾಗುತ್ತದೆ ಎಂದು ಮನಗಂಡರು. ನರಸೀಪುರದಲ್ಲಿ ಕಾಂಗ್ರೆಸ್ಸಿನ ಮುಂದಾಳಾದರು. ನಂತರ ಜೈಲುವಾಸ ಅನುಭವಿಸಿದರು. ಎಂ.ಎನ್.ಸಿದ್ದಯ್ಯ ಇವರು ಟಿ. ನರಸೀಪುರದ ರಂಗಸಮುದ್ರದವರು, ಮೊದಲಿನಿಂದಲೂ ಖಾದಿದಾರಿಗಳು, 1939ರಂದು ಮೈಸೂರಿನಲ್ಲಿ ನಡೆದ ಸತ್ಯಾಗ್ರಹದಲ್ಲಿ ಸಿದ್ದೇಗೌಡ, ಬೋರಯ್ಯ, ಲಿಂಗೇಗೌಡ, ನರಸೇಗೌಡ ಹಾಗೂ ಮುದಿಯಪ್ಪಗೌಡ ಇವರೊಡನೆ ಪಾಲ್ಗೊಂಡು ಜೈಲು ಶಿಕ್ಷೆ ಅನುಭವಿಸಿದರು ಹಾಗೂ 1940ರಲ್ಲಿ ಟಿ. ನರಸೀಪುರ ತಾಲೂಕಿನಲ್ಲಿ ಎಲ್ಲಾ ಕಡೆ ಸಂಚರಿಸಿ 5000ಕ್ಕೂ ಮೇಲ್ಪಟ್ಟು ಕಾಂಗ್ರೆಸ್ಸಿಗೆ ಸದಸ್ಯತ್ವವನ್ನು ಕೊಡಿಸಿದರು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಟೆಲಿಪೋನ್ ತಂತಿ ಕತ್ತರಿಸಿದ್ದು ಅಲ್ಲದೆ ಹೆಂಡದಂಗಡಿ ಪಿಕೆಟಿಂಗ್ ಮಾಡಿದರು. ಇವರನ್ನು ಬಂದಿಸಿದರು, ಜನರು ರೊಚ್ಚಿಗೆದ್ದರು. ತುಮಕೂರು, ಹಾಸನ, ಶಿವಮೊಗ್ಗ ಜೈಲುಗಳಲ್ಲಿ ಶಿಕ್ಷೆ ಅನುಭವಿಸಿದರು. 1947ರ ಚಳುವಳಿಯಲ್ಲಿಯೂ ಪಾಲ್ಗೊಂಡಿದ್ದರು, ಚಳುವಳಿಯಲ್ಲಿ ಚಾಮರಾಜನಗರ, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ ತಾಲ್ಲೂಕುಗಳಲ್ಲಿ ಅವರು ಮಾಡಿದ ಕೆಲಸ ಸ್ತುತ್ಯರ್ಹ.

ಟಿ.ನರಸೀಪುರ,ಬನ್ನೂರು ಮೊದಲಾದೆಡೆ ಹಳ್ಳಿ-ಹಳ್ಳಿಗಳಲ್ಲಿ ವಿರೋಧಿ ಘೋಷಣೆ ಕೂಗುತ್ತಾ ಹೋರಾಟ ಕಟ್ಟಿದ ವಿ.ಎಸ್,ವೆಂಕೋಬರಾವ್, ಟಿ,ಆರ್,ಪವಮಾನ, ವರಹಮೂರ್ತಿ, ಎಸ್.ನಾಗಭೂಷಣ, ನಾಗಪ್ಪ, ಕೃಷ್ಣಅಯ್ಯಂಗಾರ್ ಮೊದಲಾದವರು ಮೂಗೂರು ಬಳಿ ಬಂಧಿತರಾಗಿದ್ದಾರೆ. ಟಿ.ನರಸೀಪುರ ತಾಲೂಕಿನ ರಂಗಸಮುದ್ರದ ಎಂ.ಎನ್.ಸಿದ್ದಯ್ಯನವರು ಎಲೆಕ್ಟ್ರಿಕ್ ಹಾಗೂ ಟೆಲಿಫೋನ್ ತಂತಿ ಕತ್ತರಿಸಿ ಹೋರಾಡುತ್ತಾ, ಬನ್ನೂರಿನಲ್ಲಿ ಕೆಂಚೇಗೌಡ, ಟೈಲರ್ ಕೃಷ್ಣ, ವೆಂಕಟರಾಮು, ಟಿ.ವಿ.ಕೃಷ್ಣ, ನಾಗೇಶ್ ಮೊದಲಾದವರೊಡನೆ ಬಂಧಿತರಾಗಿದ್ದಾರೆ.

ನಂಜನಗೂಡಿನ ವಿದ್ಯಾರ್ಥಿ ಸಮ್ಮೇಳನ ಬಿ.ಶ್ರೀಕಂಠಯ್ಯನವರು 1934ರಲ್ಲಿ ನಂಜನಗೂಡಿಗೆ ಮಹಾತ್ಮಗಾಂಧಿಯವರು ಭೇಟಿ ನೀಡಿದಾಗ ನಾನು ಸಣ್ಣ ವಯಸ್ಸಿನವನು, ಗಾಂಧಿಯವರ ದರ್ಶನವಾಯಿತು. 1945–46ರಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನ ನಂಜನಗೂಡಿನಲ್ಲಿ ಏರ್ಪಾಡು ಮಾಡಿದಾಗ ಅಶೋಕಮೆಹ್ತಾ ಮತ್ತು ಅಚ್ಚುತಪಟವರ್ಧನ್ ಭಾಷಣವಿತ್ತು. ಅಚ್ಚುತಪಟವರ್ಧನ್ ದಸ್ತಗಿರಿಯಾಯಿತು. ನಂಜನಗೂಡು 1942ರ ಕ್ವಿಟ್‌ಇಂಡಿಯಾ ಸತ್ಯಾಗ್ರಹದಲ್ಲಿ ಪೈಲ್ವಾನ್ ನಂಜಪ್ಪನವರು ಭಾಗವಹಿಸಿದ್ದರು. ಲೇಟ್ ಬಂಡಯ್ಯನವರು ನಂಜನಗೂಡು ಟೌನ್ ಕಣಜದ ಬೀದಿಯಲ್ಲಿ ವಾಸವಾಗಿರುವ ಇವರು ದೇಶಕ್ಕಾಗಿ ಸೇವೆ ಸಲ್ಲಿಸುತ್ತಾ 1942ರ ಸತ್ಯಾಗ್ರಹದಲ್ಲಿ ಭಾಗವಹಿಸಿದರು. 1947ರ ಮೈಸೂರು ಚಲೋ ಚಳುವಳಿಯಲ್ಲಿ ಬಿ.ಶ್ರೀಕಂಠಯ್ಯನವರು ಭಾಗವಹಿಸಿ ನಂಜನಗೂಡು ಸೆರಮನೆಯ ಮೇಲೆ ತ್ರಿವರ್ಣ ಬಾವುಟ ಹಾರಿಸಿದರು. ಅನಂತರ ಪುರಸಭೆ ಹತ್ತಿರ, ನನ್ನನ್ನು ದಸ್ತಗಿರಿ ಮಾಡಿ ಮೈಸೂರು ಜೈಲಿನಲ್ಲಿ ಒಂದು ತಿಂಗಳು ಸೆರೆಮನೆವಾಸ ಅನುಭವಿಸಿದರು. ಪೈಲ್ವಾನ್ ನಂಜಪ್ಪ 1947ರ ಮೈಸೂರು ಚಳುವಳಿಗೆ ನಂಜನಗೂಡಿನಿಂದ ಹೊರಟು ಪೊಲೀಸರಿಂದ ಅರೆಸ್ಟ್ ಆಗಿ ಮೈಸೂರು ಕಾರಾಗೃಹದಲ್ಲಿದ್ದರು. ನಂತರ ಲೇಟ್ ಬಂಡಯ್ಯನವರು 1947ರ ಮೈಸೂರು ಚಲೋ ಸತ್ಯಾಗ್ರಹಕ್ಕೆ ನಂಜನಗೂಡಿನಿಂದ ಹೊರಟು ಪೊಲೀಸರಿಂದ ಅರೆಸ್ಟ್‌ಆಗಿ ಮೈಸೂರು ಜೈಲಿನಲ್ಲಿದ್ದರು. ಎನ್.ಸುಬ್ಬರಾವ್‌ರವರು ನಂಜನಗೂಡಿನಲ್ಲಿ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಎರಡು ವರ್ಷ ಜೈಲುವಾಸ ಅನುಭವಿಸಿದರು.

ಕೆ.ಆರ್.ನಗರದವರು ಸಿ.ಎಸ್.ನಾರಾಯಣಸ್ವಾಮಿ, ಬಿ.ಎಸ್ ತೋಟಪ್ಪ ಇವರು ಪ್ರೌಢ ಶಿಕ್ಷಣ ಪಡೆಯುತ್ತಿದ್ದಾಗ ತಾಯಿನಾಡು ಪತ್ರಿಕೆಯನ್ನು ತಪ್ಪದೇ ಓದುತ್ತಿದ್ದರು. ರಾಮಚಂದ್ರರಾಯರ ಚಳುವಳಿಗಳನ್ನು ಕಣ್ಣಾರೆ ನೋಡಿ ಮನಸ್ಸಾಯಿತು. 1938ರ ಶಿವಪುರ ಸತ್ಯಾಗ್ರಹಕ್ಕೆ ಕೆ.ಆರ್ ನಗರದ ವೈ.ಎನ್.ನಂಜುಂಡಪ್ಪ ಹಾಗೂ ಇನ್ನು ಇಬ್ಬರು ಹೋಗಿದ್ದೆವು, ನನಗೆ ಎರಡು ತಿಂಗಳು ಶಿಕ್ಷೆ ಆಯಿತು, ನಂತರ ಮೈಸೂರು ಟೌನ್ ಹಾಲ್ ಸತ್ಯಾಗ್ರಹದಲ್ಲಿ ಭಾಗವಹಿಸಿದೆ. ಈ ಸಂಬಂಧ ನನಗೆ 7 ತಿಂಗಳು ಶಿಕ್ಷೆ, ರೂ.50 ದಂಡ ವಸೂಲಿಗಾಗಿ ಮನೆಯಲ್ಲಿ ಪಾತ್ರೆ ಮಾರಿದರು.

ವೈ.ಎನ್.ನಂಜುಂಡಪ್ಪ ಹುಟ್ಟೂರು ಎಡತೊರೆ ಅಥವಾ ಕೆ.ಆರ್.ನಗರ ಶಾಲೆಯಿಂದ ಹೊರಗಡೆ ಬಂದು ಮಹಾತ್ಮ ಗಾಂಧೀಜಿಕಿ ಜೈ, ವಿದೇಶಿ ಸರ್ಕಾರಕ್ಕೆ ಧಿಕ್ಕಾರ, ಭಾರತ್‌ಮಾತಾಕಿ ಜೈ, ವಂದೇ ಮಾತರಂ ಎಂಬ ಘೋಷಣೆಗಳು. ವಿದ್ಯಾರ್ಥಿ ಮುಖಂಡರು ರೈಲು ಯಾರದು ಎಂದು ಕೂಗಿದರೆ. ರೈಲು ನಮ್ಮದು ಎಂದು ಹೇಳಿ ಟಿಕೆಟ್ ಇಲ್ಲದೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. 1942ರ ಕ್ವಿಟ್ ಇಂಡಿಯಾ

ಚಳುವಳಿಯಲ್ಲಿ ಭಾಗವಹಿಸಿದ್ದರು. ಪೊಲೀಸರು ತಡೆದರು, ಲಾಠಿಚಾರ್ಜ್ ಆಯಿತು, ಇದರಿಂದ ಅನಂತಯ್ಯನವರ ತಲೆಗೆ ಬಾರಿ ಪೆಟ್ಟು ಬಿದ್ದಿತ್ತು.ವಿ. ಲಕ್ಕಯ್ಯಇವರು 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಕೃಷ್ಣರಾಜನಗರದ ಸ್ನೇಹಿತರ ಜೊತೆಯಲ್ಲಿ ಭಾಗವಹಿಸಿದರು. ಈಚಲು ಮರಗಳನ್ನು ಕತ್ತರಿಸುವುದು, ಸೇಂದಿ ಮಾರುವ ಗುಡಿಸಲುಗಳಿಗೆ ಬೆಂಕಿ ಹಚ್ಚುವ ಕಾರ್ಯದಲ್ಲಿ ನಿರತರಾಗಿದ್ದಾಗ ಪೊಲೀಸರು ಬಂಧಿಸಿ ಬೆಂಗಳೂರು ಸೆಂಟ್ರಲ್ ಜೈಲಿಗೆ ಕಳುಹಿಸಿದರು. ಜೈಲಿನಲ್ಲಿದ್ದಾಗ ಜೈಲಿನಲ್ಲಿದ್ದ ಹುಣಸೆ ಮರವನ್ನು ಏರಿ ಅಲ್ಲಿಗೆ ಕಾಣುತ್ತಿದ್ದ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು ನಡೆಸುತ್ತಿದ್ದ ಚಳುವಳಿ ಮಾಹಿತಿಯನ್ನು ನನ್ನ ಸ್ನೇಹಿತರಿಗೆ ಹೇಳುತ್ತಿದ್ದೆ, ಒಂದು ದಿನ ಜೈಲು ಸೂಪರಿಡೆಂಟ್ ನನ್ನ ಈ ಕಾರ್ಯವನ್ನು ಗಮನಿಸಿದರು. ಹುಣಸೆ ಮರವನ್ನು ಬುಡ ಸಹಿತ ಕಡಿಸಿಬಿಟ್ಟರು, ಅನಂತರ ನನ್ನನ್ನು ಶ್ರೀರಂಗಪಟ್ಟಣ ಜೈಲಿಗೆ ವರ್ಗಾಯಿಸಿದರು.

ಬಿ.ಎ.ವಾಹಿದ್‌ಖಾನ್ ಇವರು 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ವೈ.ಎನ್ ನಂಜುಂಡಪ್ಪ, ಸೋನಾಜಿರಾವ್, ಅನಂತಯ್ಯ ಇವರು ಕಾಂಗ್ರೆಸ್ಸಿನ ಚಳುವಳಿಯಲ್ಲಿ ಭಾಗವಹಿಸಿದರು. ಮೈಸೂರು ಜೈಲಿನಲ್ಲಿ ಸೆರೆಮನೆವಾಸ ಅನುಭವಿಸಬೇಕಾಯಿತು. ಕೃಷ್ಣರಾಜನಗರದ ಕೋಮುವಾರು ಸ್ನೇಹ–ಸೌಹಾರ್ದಕ್ಕೆ ಬಹುಮಟ್ಟಿಗೆ ಕಾರಣರಾದರು. ಕೆ.ಆರ್.ನೀಲಕಂಠಯ್ಯ ಇವರು ಮತ್ತು ಇವರ ಗೆಳೆಯರು ವಿದ್ವಾಂಸಕ ಕೃತ್ಯಗಳನ್ನು ಕೈಗೊಂಡರು. ವೈ.ಎಸ್.ರಾಮಚಂದ್ರರಾವ್, ವೈ.ಎಸ್.ಮೋಟಪ್ಪ, ಬಿ.ವೈ.ಸಿದ್ದೋಜಿರಾವ್ ಎಸ್.ಕೆ.ವೆಂಕಟಸುಬ್ಬಯ್ಯ ಇತರರು ಸೇರಿ ಹೆಂಡದ ಲಾರಿ ಉರುಳಿಸುವುದು, ಹೆಂಡದ ಗಾಡಿಗೆ ಬೆಂಕಿ ಹಾಕುವುದು, ಟೆಲಿಗ್ರಾಂ, ಟೆಲಿಫೋನ್ ಕತ್ತರಿಸುವುದು, ಕಟ್ಟಡದ ಕಿಟಕಿಗಳನ್ನು ಹೊಡೆಯುವುದು, ರೈಲ್ವೆ ಕಂಬಿಗಳನ್ನು ಕೀಳುವುದು ಇತ್ಯಾದಿಗಳಲ್ಲಿ ತೊಡಗಿದ್ದರು. ಬಿ.ನಂಜಾಚಾರ್ 1942 ಆಗಸ್ಟ್ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ನಾಲ್ಕು ತಿಂಗಳು ಮೈಸೂರು ಜೈಲಿನಲ್ಲಿದ್ದಾಗ ಒಂದು ರಾತ್ರಿ 12 ಗಂಟೆ ಸಮಯದಲ್ಲಿ ಲಾಠಿಚಾರ್ಜ್ ನಡೆಯಿತು. ಆಗ ನಮ್ಮ ಕೊಠಡಿಯಲ್ಲಿಯೇ ಇದ್ದ ನಮ್ಮ ತಾಲ್ಲೂಕಿನವರಾದ ಶಂಕರಪ್ಪನವರು ಲಾಟಿ ಏಟಿಗೆ ಬಲಿಯಾಗಿ ಮೃತರಾದರು. ಎ.ಸಿ.ಪುಟ್ಟಣ್ಣಯ್ಯ ಕೃಷ್ಣರಾಜನಗರದವರು ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳುವಳಿ ಹಾಗೂ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ್ದರು, 25 ಮಂದಿ ಮೈಸೂರು ಸೆರಮನೆ ವಾಸ ಅನುಭವಿಸಿದರು. ವೈ.ಎ.ಸುಬ್ಬಯ್ಯಶೆಟ್ಟಿ ಇವರು ಮೈಸೂರು ಕಾಂಗ್ರೆಸಿನ ಸಕ್ರಿಯ ಕಾರ್ಯಕರ್ತರಾಗಿ ಕ್ವಿಟ್‌ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದರು, ಒಂದು ವರ್ಷ ಜೈಲುವಾಸ ಅನುಭವಿಸಿದರು. ಟಿ.ಪುಟ್ಟಣ್ಣ ಕೆ.ಆರ್.ನಗರದವರು ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದರು, ಜೈಲು ಅನುಭವಿಸಿದರು.

ವೈ.ಎನ್.ನಂಜುಂಡಪ್ಪ 1947ರ ಅರಮನೆ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದ್ದರು. ಪೊಲೀಸರು ಬಂಧಿಸಿ ಪಿರಿಯಾಪಟ್ಟಣ ಕಾಡಿನ ಮಧ್ಯದಲ್ಲಿ ರಾತ್ರಿ ಬಿಟ್ಟು ಹೊರಟು ಹೋದರು. ಕಾಲ್ನಡಿಗೆಯಲ್ಲಿಯೇ ಕೆ.ಆರ್.ನಗರವನ್ನು ಸೇರಿದರು. ಕೆ.ಆರ್.ನೀಲಕಂಠಯ್ಯ 1947ರ ಚಳುವಳಿಯಲ್ಲಿಯೂ ಭಾಗವಹಿಸಿದರು. ಒಂದು ವರ್ಷ ಜೈಲಿನಲ್ಲಿದ್ದರು. ವೈ.ಎ.ಸುಬ್ಬಯ್ಯಶೆಟ್ಟಿ ಇವರು ಮೈಸೂರು ಕಾಂಗ್ರೆಸಿನ ಸಕ್ರಿಯ ಕಾರ್ಯಕರ್ತರಾಗಿ ಕ್ವಿಟ್‌ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದರು, ಒಂದು ವರ್ಷ ಜೈಲುವಾಸ

ಅನುಭವಿಸಿದರು. ವೈ.ಎಸ್.ರಾಮನಾಥಶೆಟ್ಟಿ, ಆರ್.ಬಿ.ತೋಟಪ್ಪ, ವೈ.ಎ.ತಮ್ಮಯ್ಯ, ಎ.ಎಸ್.ಸಿದ್ದಲಿಂಗಪ್ಪ, ವೈ.ಎಸ್. ಸತ್ಯಮೂರ್ತಿ. ಎಂ.ಎನ್ ನಂಜಪ್ಪ, ಕೆ.ಟಿ.ರುಕ್ಮಾಂಗದ, ಬಿ.ಎಸ್ ಮಾದಪ್ಪ, ಸಿ,ಎ. ಕರಿಗೌಡ ಕೃಷ್ಣರಾಜನಗರದವರು. ಸ್ವದೇಶಿ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ, ಅರಮನೆ ಚಲೋ ಚಳುವಳಿಯಲ್ಲಿಯೂ ಭಾಗವಹಿಸಿ ಸೆರೆಮನೆ ಶಿಕ್ಷೆಯನ್ನು ಅನುಭವಿಸಿದರು.

ಸಿ.ಎಸ್ ನಾರಾಯಣಸ್ವಾಮಿ, ಬಿ.ಎಸ್ ತೋಟಪ್ಪ ಇವರು ಅರಮನೆ ಸತ್ಯಾಗ್ರಹದಲ್ಲಿ ಪಾಲುಗೊಳ್ಳಲು ಸುಮಾರು 25 ಜನ ಕೃಷ್ಣರಾಜನಗರದಿಂದ ಹೊರಟೆವು, ಬಿಳಿಕೆರೆಯಲ್ಲಿ ರಾತ್ರಿ ಮಲಗಿ ಬೆಳಿಗ್ಗೆ ಹಿನಕಲ್‌ನಲ್ಲಿ ಹೋಗುತ್ತಿದ್ದಾಗ ಬಂಧನವಾಯಿತು. ರಾತ್ರಿ ವ್ಯಾನ್ನಲ್ಲಿ ಹೊರಟು ಬೆಳಿಗ್ಗೆ 4:00 ಗಂಟೆಗೆ ಕೇರಳಾಪುರದಲ್ಲಿ ಬಿಟ್ಟರು. ಮರುದಿನ ರಾಮನಾಥಪುರ, ಬೆಟ್ಟದಪುರದ ಮೂಲಕ ಪಿರಿಯಾಪಟ್ಟಣಕ್ಕೆ ನಡೆದು ಬಂದೆವು, ಎರಡು ಊರುಗಳಲ್ಲಿ ಊರ ಜನ ಊಟೋಪಚಾರ ಮಾಡಿದರು ಎಂದು ಅವರ ಉಪಕಾರವನ್ನು ಸ್ಮರಿಸಿದ್ದಾರೆ. ಮರುದಿನ ಹೆಂಡದ ಮಡಿಕೆ ಹೊಡೆದರು ಎಂದು ಬಂಧಿಸಿ ಒಂದು ದಿನ ಲಾಕಪ್‌ನಲ್ಲಿಟ್ಟು ಮರುದಿನ ಬಿಟ್ಟರು. ಚಿಕ್ಕಡಗನಹಳ್ಳಿಯಲ್ಲಿ ಮರಾಠ ಗೃಹಸ್ಥರೊಬ್ಬರು ರೊಟ್ಟಿ ಊಟ ಹಾಕಿದರು. ಶಾಲೆ ಮುಂದೆ ಪಿಕೆಟಿಂಗ್ ಮಾಡಿದೆವು. ಬಂಧಿಸಿ ಮೈಸೂರು ಕಾರಾಗೃಹಕ್ಕೆ 15 ದಿನಗಳ ಕಾಲ ಕಳಿಸಿದರು.

ಚಾಮರಾಜನಗರ ಎಸ್.ನಾರಾಯಣಸ್ವಾಮಿಯವರು ಚಾಮರಾಜನಗರ ತಾಲೂಕಿನ ದೊಡ್ಡರಾಯಪೇಟೆ ಗ್ರಾಮದವರು. 1947ರಲ್ಲಿ ಎಸೆಸೆಲ್ಸಿ ಓದುತ್ತಿದ್ದ ಇವರಿಗೆ ಸ್ವಾತಂತ್ರ ಹೋರಾಟದ ಬಿಸಿ ತಟ್ಟಿ ಸೆರೆಮನೆವಾಸ ಕಂಡರು. ಮೈಸೂರು ಜೈಲಿನಲ್ಲಿ ಎಚ್.ಸಿ ದಾಸಪ್ಪ, ಎಸ್.ಎಂ.ಚನ್ನಬಸಪ್ಪ, ಎಸ್. ನಿಜಲಿಂಗಪ್ಪ, ಹೆಜ್ಜಿಗೆ ಲಿಂಗಣ್ಣ ಮೊದಲಾದ ಗಣ್ಯರ ಸಹಯೋಗ ಲಭಿಸಿತು. ಮಲೆಯೂರು ಗ್ರಾಮದ ಚಿಕ್ಕಲಿಂಗಪ್ಪನವರು ಚಾಮರಾಜನಗರ ತಾಲೂಕಿನವರು. ಈ ತಾಲೂಕಿನ ಸಾರ್ವಜನಿಕ ಜೀವನದ ಎಲ್ಲಾ ಮುಖಂಡರು ದಿವಾನ್ ಮಿರ್ಜಾಸಾಹೇಬರ ಹಿಂಬಾಲಕರಾಗಿದ್ದರು. ಸಭೆಗಳನ್ನು ಮಾಡಿ ಕಾಂಗ್ರೆಸ್ ಚಾಮರಾಜನಗರ ತಾಲೂಕಿನಲ್ಲಿ ತಲೆಯೆತ್ತದಂತೆ ಮಾಡುತ್ತೇವೆಂದು ಅನೇಕ ಮುಖಂಡರು ಶಪಥ ಮಾಡಿದ್ದರು. ಇಂತಹ ಸನ್ನಿವೇಶದಲ್ಲಿ ಸಿ.ಗೋಪಾಲರಾವ್ ನಾಯಕತ್ವದಲ್ಲಿ ಒಂದು ಯುವಕರ ಗುಂಪು ತಾಲ್ಲೂಕಿನಲ್ಲಿ ಸ್ಥಾಪನೆಯಾಯಿತು. ಯುವಕರ ಗುಂಪಿಗೆ ನಿಸ್ವಾರ್ಥ ಸೇವೆಯ ಸಹಕಾರ ನೀಡಿದರು. ಕಾಂಗ್ರೆಸ್ ಚಳುವಳಿಗಳಲ್ಲಿ ಭಾಗವಹಿಸಿ ಜೈಲು ಕಂಡರು. ಚಾಮರಾಜನಗರದಲ್ಲಿ ಕಾಂಗ್ರೆಸನ್ನು ಬೆಳಸಿದ ಕೀರ್ತಿ ಇವರದು. ಆಲೂರು ಮಹದೇವಪ್ಪ, ಜಯಸಿದ್ದನಾಯಕ ಚಾಮರಾಜನಗರ ತಾಲೂಕಿನವರು ಇವರು ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಕೆಲಕಾಲ ಮೈಸೂರು ಜೈಲಿನಲ್ಲಿ ಸೆರೆಮನೆವಾಸ ಅನುಭವಿಸಿದರು.

ಚಾಮರಾಜನಗರ ಜಿಲ್ಲೆಯಲ್ಲಿಯೂ 1942ರ ಚಲೇಜಾವ್ ಚಳುವಳಿ ತಿವ್ರವಾಗಿ ನಡೆದಿದೆ. ಹೆಗ್ಗಡದೇವನಕೋಟೆಯ ಅಡವಿಯಲ್ಲಿ ಅಡಗಿಕೊಂಡು ಬೊಮ್ಮೇಗೌಡ, ಪುಟ್ಟೇಗೌಡ, ದೊಡ್ಡೇಗೌಡ, ಸಂಜೀವಯ್ಯ, ಕಿತ್ತೂರು ಶಿವಲಿಂಗಯ್ಯ, ಮೊದಲಾದವರು ಭೂಗತ ಕಾರ್ಯಗಳನ್ನು ನಡೆಸಿದ್ದಾರೆ. ಹಳ್ಳಿಹಳ್ಳಿಗಳಲ್ಲಿ ಟೆಲಿಫೋನ್ ತಂತಿ ಹಾಗೂ ಕಂಬಗಳನ್ನು ಕಿತ್ತು ಹಾಕಿದ್ದಾರೆ. 09.08.1942ರಂದು ಚಾಮರಾಜನಗರ ಬಸ್ ನಿಲ್ದಾಣದ ಬಳಿಯ ಮೈದಾನದಲ್ಲಿ ಆಗಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ

ಮಲ್ಲಿಯೂರಿನ ಚಿಕ್ಕಲಿಂಗಪ್ಪನವರು ಭಾಷಣ ಮಾಡಿ ಬಂಧಿತರಾಗಿದ್ದಾರೆ. ಪ್ರತಿದಿನ ಕಾರ್ಯಕ್ರಮ ನಡೆಸಿ ಬಂದಿತರಾಗುವ ಯೋಜನೆಯಂತೆ ಹಲವರು ಚಾಮರಾಜನಗರದಲ್ಲಿ ಬಂಧಿತರಾಗಿದ್ದುದನ್ನು ಸಿ.ಗೋಪಾಲರಾವ್ ಅವರು ತಾವು ಮೆರವಣಿಗೆಯಲ್ಲಿ ಸಾಗಿ ಬಂಧಿತರಾದ ಸಂದರ್ಭದಲ್ಲಿ ನೆನೆದಿದ್ದಾರೆ.

ಪೂಜಾರೂರಿನ ಡಿ.ಜೆ ಶಂಕರಪ್ಪ. ಚಾಮರಾಜನಗರ ತಾಲೂಕು ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ನಾಗರಾಜು, ಚಾಮರಾಜನಗರದ ಯತಿರಾಜು, ನಾಗೇಶ್, ಎಸ್.ವೆಂಕಟರಾವ್, ಕೆ.ವಿ.ಕೃಷ್ಣಮೂರ್ತಿ, ಟೈಲರ್ ರಂಗಸ್ವಾಮಿ, ರಂಗಸ್ವಾಮಿನಾಯಕರು, ಪದ್ಮರಾಜ ಪಂಡಿತರು, ಕುದೇರಿನ ಪುಟ್ಟಸ್ವಾಮಿ ಮೊದಲಾದವರು ಚಾಮರಾಜನಗರ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲಿ ಹೋರಾಟದ, ದೇಶಭಕ್ತಿಯ ಕಿಚ್ಚು ಹೊತ್ತಿಸಿ ಬಂಧಿತರಾಗಿ ಸೆರೆಮನೆ ವಾಸವನ್ನು ಅನುಭವಿಸಿದ್ದಾರೆ. ಮೈಸೂರು ತಾಲ್ಲೂಕಿನ ಇಲವಾಲ ಗ್ರಾಮದಲ್ಲಿ ಉಪಾಧ್ಯಾಯರಾಗಿದ್ದ ಹೆಗ್ಗಡದೇವನಕೋಟೆ ತಾಲೂಕಿನ ಜಿನ್ನಹಳ್ಳಿ ಜೆ.ಸಿ ಚಂದ್ರಶೇಖರ್ ಆರಾಧ್ಯ ಅವರು ಕೆಲಸಕ್ಕೆ ರಾಜೀನಾಮೆ ನೀಡಿ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿ ಬಂಧಿತರಾಗಿದ್ದಾರೆ.

ಡಿ.ಜೆ ಶಂಕರಪ್ಪ ಇವರು ಚಾಮರಾಜನಗರ ತಾಲೂಕಿನ ದೊಡ್ಡರಾಯಪೇಟೆ ಗ್ರಾಮದವರು. 1932 ರಿಂದ 1942ರ ಚಳುವಳಿ, 1947ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. ಬೆಂಗಳೂರು ಸೆಂಟ್ರಲ್ ಜೈಲ್, ಹಾಸನ ಸಬೆಜೈಲುಗಳಲ್ಲಿ ಒಂದು ವರ್ಷಕ್ಕೂ ಹೆಚ್ಚು ಜೈಲುವಾಸ ಅನುಭವಿಸಿದರು. ಬ್ರಿಟಿಷ್ ಸರ್ಕಾರದ ವಿರುದ್ಧ ಗಾಂಧೀಜಿ ಅವರ ನಾಯಕತ್ವ ಬೆಂಬಲಿಸಿ ಚಾಮರಾಜನಗರ ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷ ರಚಿಸಿಕೊಂಡು ಸಿ.ಗೋಪಾಲರಾವ್, ವೆಂಕಟರಾವ್, ಕೃಷ್ಣಮೂರ್ತಿ, ರಂಗಸ್ವಾಮಿ, ರಂಗಸ್ವಾಮಿನಾಯಕ, ಮಲೆಯೂರು ಚಿಕ್ಕಲಿಂಗಪ್ಪ, ಪುಟ್ಟನಂಜಪ್ಪ, ರಾಜುಗಾಂಧಿ, ಬಸವಯ್ಯ, ನಾಗೇಶ್‌ರಾವ್, ಕೆಂಪಶೆಟ್ಟಿ ಮುಂತಾದವರು ಗುಪ್ತವಾಗಿ ಸಭೆ ಸೇರಿ ದೇಶದ ಸ್ವಾತಂತ್ರಕ್ಕಾಗಿ ಪ್ರಾಣವನ್ನಾದರೂ ಕೊಟ್ಟು ಹೋರಾಟ ಮಾಡಲು ನಿರ್ಣಯವನ್ನು ಕೈಗೊಂಡರು.

ಮೈಸೂರು ಸಂಸ್ಥಾನದಲ್ಲಿ ನಾಯಕರಾದ ಟಿ. ಸಿದ್ದಲಿಂಗಯ್ಯ, ಎಂ.ಎನ್. ಜೋಯಿಸ್, ಸಾಹುಕಾರ್ ಚೆನ್ನಯ್ಯ, ತಗಡೂರು ರಾಮಚಂದ್ರರಾವ್ ಇವರ ನೇತೃತ್ವದಲ್ಲಿ ಚಲೇಜಾವ್ ಚಳುವಳಿ ಮತ್ತು ತಗಡೂರು ರಾಮಚಂದ್ರ ಅವರ ನೇತೃತದಲ್ಲಿ ಊರಿಗೆ ಗಾಂಧಿಯವರನ್ನು ಕರೆದುಕೊಂಡು ಬಂದು ಅಂದಿನ ದೇಶದ ರಾಜಕೀಯ ಆರ್ಥಿಕ ಮತ್ತು ಧಾರ್ಮಿಕ ವಿಷಯಗಳ ಬಗ್ಗೆ ಗಾಂಧೀಜಿಯವರೊಡನೆ ಸಮಾಲೋಚಿಸಲಾಯಿತು. ನಾನು ದೇಶಕ್ಕೆ ಸ್ವಾತಂತ್ರ ಬರುವ ತನಕ ಲಗ್ನ ಆಗುವುದಿಲ್ಲವೆಂದು ಡಿ.ಜೆ ಶಂಕರಪ್ಪ ಪ್ರತಿಜ್ಞೆ ಮಾಡಿದ್ದರು. ಅದರಂತೆ 1947ರಲ್ಲಿ ಮದುವೆ ಆದರು.

ಗುಂಡ್ಲುಪೇಟೆ ತಾಲೂಕಿನ ಸಿಂಧುವಳ್ಳಿ ಸುಬ್ರಮಣ್ಯಂ ಇವರು ಸಿಂಧುವಳ್ಳಿ ಗ್ರಾಮದವರು. ಪ್ರೌಢಶಾಲಾ ವಿದ್ಯಾಭ್ಯಾಸ ಮಾಡುತ್ತಿರುವ ಸಂದರ್ಭದಲ್ಲಿ ಮೈಸೂರಿನ ಹೆಚ್.ಸಿ.ದಾಸಪ್ಪ, ಟಿ.ಮರಿಯಪ್ಪ. ಎಂ.ಎನ್ ಜೋಷಿಸ್. ಹೆಚ್.ಎಂ ಚನ್ನಬಸಪ್ಪ ಮುಂತಾದವರ ಭಾಷಣಗಳಿಂದ ಪ್ರೇರಿತರಾದರು. 1942ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭೂಗತ ಚಳುವಳಿಗಾರರು ವಿಜೃಂಭಿಸಿದರು. ಎಚ್.ಕೆ.ಕುಮಾರಸ್ವಾಮಿ, ಶಾರದಾಪ್ರಸಾದ್, ಕೆ,ಕಾಳಯ್ಯ. ಮುಂತಾದವರ ಒಡನಾಡಿಯಾಗಿ ಇವರು ಕೆಲಸ ಮಾಡಿದರು. 1947ರ ಮೈಸೂರು ಚಲೋ ಚಳುವಳಿಯಲ್ಲಿ ಪೊಲೀಸರ ಕಿರುಕುಳಕ್ಕೆ ಮತ್ತು ಹಿಂಸೆಗೆ ಗುರಿಯಾದರು. ಶ್ರೀಯುತರು

ಜನಾನುರಾಗಿಗಳಾಗಿದ್ದರು, ಸರ್ವೋದಯ, ಹರಿಜನ ಸೇವೆ, ಗೋರಕ್ಷಣೆ, ಪಾನನಿರೋಧ ಮುಂತಾದ ರಚನಾತ್ಮಕ ಕಾರ್ಯಗಳಲ್ಲಿ ಕೊನೆಯವರೆಗೂ ತೊಡಗಿಸಿ ಕೊಂಡಿದ್ದರು. ಜಿ.ಎಂ ಚಿಕ್ಕಣ್ಣ ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಕಸಬಾ ಗ್ರಾಮದಲ್ಲಿರುವ ಕುರುಬ ಜನಾಂಗದ ವ್ಯಕ್ತಿ. ತಾಯಿನಾಡು ಪತ್ರಿಕೆಯನ್ನು ಓದಿ ಪ್ರಭಾವಗೊಂಡು ಚಿಕ್ಕಂದಿನಲ್ಲಿ ದೇಶಕ್ಕಾಗಿ ಏನನ್ನಾದರೂ ಸಾಧಿಸಬೇಕೆಂಬ ಮನೋಭವ ಮೂಡಿತು. ಮಹಾತ್ಮ ಗಾಂಧೀಜಿ ಅವರು ರೈಲಿನಲ್ಲಿ ಮೈಸೂರಿಗೆ ಬಂದಾಗ ಅವರ ದರ್ಶನ ಪಡೆಯಲು ಕಾಲ್ನಡಿಗೆಯಲ್ಲಿಯೇ ಮೈಸೂರಿನವರೆಗೂ ಹೋಗಿ ಬಂದರು. ಗುಂಡ್ಲುಪೇಟೆಯ ಹುಣಿಸೆಯ ತೋಪಿನಲ್ಲಿ ಹಿರಿಯ ಸ್ವಾತಂತ್ರ ಹೋರಾಟಗಾರರಾದ ತಗಡೂರು ರಾಮಚಂದ್ರರಾಯರು ಮತ್ತು ಎಂ.ಎನ್.ಜೋಯಿಸರು ಮಾಡಿದ ಭಾಷಣಗಳು ಇವರನ್ನು ತಟ್ಟಿ ಎಬ್ಬಿಸಿದವು. ಮೈಸೂರು ಚಲೋ ಚಳುವಳಿಯಲ್ಲಿ ಕಸಬಾ ಗ್ರಾಮದ ಶೇಂದಿ ಅಂಗಡಿಯೊಂದಕ್ಕೆ ಬೆಂಕಿ ಹಾಕಿದಾಗ ಪೊಲೀಸರು ಬಂಧಿಸಿ ಮೈಸೂರಿನಲ್ಲಿ 19 ದಿನಗಳ ಕಾಲ ಬಂಧನದಲ್ಲಿರಿಸಿದರು. ದಾಸಪ್ಪನವರ ಮುಖಂಡತ್ವದಲ್ಲಿ ವಿದೇಶಿ ವಸ್ತುಗಳನ್ನು ಬಿಟ್ಟು, ಸ್ವದೇಶಿ ವಸ್ತು ಧರಿಸುವುದಾಗಿ, ಮದ್ಯಪಾನ ಮಾಡುವುದಿಲ್ಲವೆಂದು ಪ್ರಮಾಣ ಮಾಡಿ ಅದರಂತೆ ನಡೆದರು.

ರಾಚನಾಯಕ ಇವರು ಗುಂಡ್ಲುಪೇಟೆ ತಾಲ್ಲೂಕಿನ ಚಿಕ್ಕತುಪ್ಪೂರ್ ಗ್ರಾಮದವರು, ಎಲೆ ತೋಟದ ಕೆಲಸಗಾರರು ಎಲೆ ಮಾರಲು ಗುಂಡ್ಲುಪೇಟೆಗೆ ಹೋಗಿದ್ದಾಗ ಮೈಸೂರು ಜಿಲ್ಲೆಯಲ್ಲಿ ಮೆರವಣಿಗೆ ಸಾಗುತ್ತಿತ್ತು. ಇವರನ್ನು ಬಂಧಿಸಿ ನಂಜನಗೂಡಿನ ಸೆರೆಮನೆಯಲ್ಲಿ ಇಟ್ಟರು.ಕಾಳನಾಯಕ ಗುಂಡ್ಲುಪೇಟೆ ತಾಲ್ಲೂಕಿನ ಹೊಸೂರು ಗ್ರಾಮದ ಬೀಡಿ ಕಾರ್ಮಿಕರು, ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾಗಿ ಮೈಸೂರು ಜೈಲಿನಲ್ಲಿ ಇದ್ದರು. ಮಾದಯ್ಯ ಗುಂಡ್ಲುಪೇಟೆಯಲ್ಲಿ ವಾಸಿಸುತ್ತಿದ್ದರು. ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದರು, ಪೊಲೀಸ್ ವ್ಯಾನಿನಲ್ಲಿ ತುಂಬಿಕೊಂಡು ಮೈಸೂರು ಜೈಲಿಗೆ ಹಾಕಿದರು. ಸೆರೆಮನೆಯಿಂದ ಬಿಡುಗಡೆಯಾದ ಮೇಲೆ ಇವರು ಹರಿಜನರಲ್ಲಿ ದೇಶ ಪ್ರೇಮ ಬಿತ್ತುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹುಚ್ಚೇಗೌಡ ವೃತ್ತಿಯಲ್ಲಿ ವ್ಯವಸಾಯ, ಮೈಸೂರು ಚಲೋಜಾವ್ ಚಳುವಳಿಯಲ್ಲಿ ಭಾಗವಹಿಸಿದರು. ಯುವಕರ ಮೇಲೆ ಲಾಠಿಚಾರ್ಜ್ ಮಾಡಿದಾಗ ಗೌಡರು ಪೊಲೀಸರ ಮೇಲೆ ತಿರುಗಿ ಬಿದ್ದರು, ಇದರಿಂದ ಪೊಲೀಸರು ಇವರನ್ನು ಬಂಧಿಸಿ ಮೈಸೂರು ಜೈಲಿಗೆ ಕಳುಹಿಸಿದರು. ಮಾಯಿಗೌಡರು ಕಸುಬು ವ್ಯವಸಾಯ ಗುಂಡ್ಲುಪೇಟೆಯಲ್ಲಿ ಮೈಸೂರು ಚಲೋ ಚಳುವಳಿ ನಡೆಯುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಾಠಿ ಚಾರ್ಜ್, ದೌರ್ಜನ್ಯ ನಡೆಸಿದರು. ದೌರ್ಜನ್ಯವನ್ನು ಖಂಡಿಸಿದರು, ಇದಕ್ಕೋಸ್ಕರ ಇವರನ್ನು ಬಂಧಿಸಿ ಮೈಸೂರಿಗೆ ಕಳಿಸಿದರು. ಬಾಲಚಂದ್ರಶೆಟ್ಟಿ ಕಸುಬು ನೇಕಾರಿಕೆ, ಗಾಂಧಿ ಎಂದರೆ ಖಾದಿ ಎಂದು ಮೈಗೂಡಿಸಿಕೊಂಡಿದ್ದರು. ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ್ದರು. ಮೈಸೂರ್ ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು.

ಲಕ್ಷ್ಮಯ್ಯ ಗುಂಡ್ಲುಪೇಟೆಯ ಹರಿಜನಕೇರಿ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರು. ಗಾಂಧೀಜಿಯವರು ಹರಿಜನರ ಏಳಿಗೆಗೋಸ್ಕರ ನಡೆಸುತ್ತಿದ್ದ ಕಾರ್ಯಕ್ರಮಗಳು ಇವರ ಮನಸ್ಸಿನ ಮೇಲೆ ಸಾಕಷ್ಟು ಪರಿಣಾಮ ಬೀರಿತು. ಮೈಸೂರು ಚಲೋ ಚಳುವಳಿಯಲ್ಲಿ ಇವರು ಧುಮುಕಿದರು. ಇದರ ಪರಿಣಾಮವಾಗಿ ಮೈಸೂರು ಜೈಲಿನಲ್ಲಿ ಸೆರೆವಾಸ ಅನುಭವಿಸಿದರು. ಎ.ಬೋರಯ್ಯ, ದೊಡ್ಡೇಗೌಡ ಗುಂಡ್ಲುಪೇಟೆಯಲ್ಲಿ ಇವರು

ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ, ಸೆರೆಮನೆವಾಸ ಅನುಭವಿಸಿದರು. ಕರಿಶೆಟ್ಟಿ ಇವರು ಗುಂಡ್ಲುಪೇಟೆಯಲ್ಲಿ ಚಿಲ್ಲರೆ ವ್ಯಾಪಾರಿಯಾಗಿ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದರು. ರಂಗನಾಯಕ ಗುಂಡ್ಲುಪೇಟೆಯಲ್ಲಿ ಮೈಸೂರುಚಲೋಚಳುವಳಿ ವಿದ್ಯಾರ್ಥಿಗಳಿಂದ ಚುರುಕಾಗಿ ನಡೆಯುತ್ತಿತ್ತು. ಇವರನ್ನು ಬಂಧಿಸಿ ಜೈಲಿಗೆ ಕಳುಹಿಸಿದರು. ಪುಟ್ಟವೀರನಾಯಕ ಗುಂಡ್ಲುಪೇಟೆಯ ಬಿಡಿಕಾರ್ಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.ಜಿ.ಎಲ್, ನಾಗಯ್ಯ ವೃತ್ತಿ ವ್ಯವಸಾಯ. ಗುಂಡ್ಲುಪೇಟೆಯಲ್ಲಿ ನಡೆಯುತ್ತಿದ್ದ ಮೈಸೂರು ಚಳುವಳಿಯ ಜಾಥದಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾದರು. ಇವರನ್ನು ನಂಜನಗೂಡಿನ ಲಾಕಪ್ಪಿನಲ್ಲಿರಿಸಿದರು ನಂತರ ಮೈಸೂರಿಗೆ ಕಳಿಸಿದರು. ಪಾಪಣ್ಣ ಗುಂಡ್ಲುಪೇಟೆಯಲ್ಲಿ ಮೈಸೂರು ಚಲೋ ಚಳುವಳಿ ಬಿ.ದೊಡ್ಡೇಗೌಡರ ಸಮ್ಮುಖದಲ್ಲಿ ನಡೆಯುತ್ತಿತ್ತು. ಈ ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾಗಿ ಮೈಸೂರ್ ಜೈಲು ಸೇರಿದರು.ನಾಗನಾಯಕರು ಬೀಡಿ ಕಾರ್ಮಿಕರು, ಇವರು ಕಾರ್ಮಿಕರ ಒಡಗೂಡಿ ಗುಂಡ್ಲುಪೇಟೆ, ನಂಜನಗೂಡು ಮತ್ತು ಮೈಸೂರು ಚಳುವಳಿಯಲ್ಲಿ ಭಾಗವಹಿಸಿದ್ದರು. ಎಸ್.ಮಾದನಾಯಕ ಗುಂಡ್ಲುಪೇಟೆಯ ಬಿಡಿ ಕಾರ್ಖಾನೆ ಕಾರ್ಮಿಕರು, ಮೈಸೂರು ಚಲೋ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು. ಅವರ ರಂಗಸ್ಥಳ ಗುಂಡ್ಲುಪೇಟೆ ಟೌನ್ ಆಗಿತ್ತು. ಜೈಲುವಾಸ ಅನುಭವಿಸಿದರು.

ಯಳಂದೂರು ತಾಲ್ಲೂಕು ಸೂರ್ಯನಾರಾಯಣ ಪಂಡಿತರು ಶ್ರೀಯುತರು ಯಳಂದೂರು ತಾಲೂಕು ಅಗರಗ್ರಾಮಕ್ಕೆ ಸೇರಿದವರು. ಇವರು ಮುದವೀಡು ಕೃಷ್ಣರಾವ್, ಕಡಪಾ ರಾಘವೇಂದ್ರರಾವ್ ಮೊದಲಾದವರ ಭಾಷಣದಿಂದ ಪ್ರೇರಿತರಾಗಿ ಕಾಂಗ್ರೆಸ್ ಚಟುವಟಿಕೆಗಳಲ್ಲಿ ತೊಡಗಿದ್ದರು. ತಾತಯ್ಯನವರು, ಅಗರಂ ರಂಗಯ್ಯನವರು, ತಗಡೂರು ರಾಮಚಂದ್ರರಾಯರು ಇವರಿಗೆ ಸಾರ್ವಜನಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು, ಭಾಷಣ ಮಾಡಲು ಪ್ರೋತ್ಸಾಹ ನೀಡಿದರು. ತಗಡೂರರು ನಡೆಸಿದ ಪ್ರೆಸ್ ಸತ್ಯಾಗ್ರಹ, ಹರಿಜನ ಚಳುವಳಿ ಇವುಗಳೆಲ್ಲಾ ವಕೀಲರಾದ ಕೆ, ಶೇಷಾದ್ರಿಯವರು ಅವರೊಡಗೂಡಿ ನೆರವಾಗಿದ್ದರು. 1931ರಲ್ಲಿ ಉತ್ತರ ಕರ್ನಾಟಕ ಜಿಲ್ಲೆಯ ಚಳುವಳಿಯಲ್ಲಿ ಭಾಗವಹಿಸಲು ಅವರಿಗೆ ಆಹ್ವಾನ ಬಂದಿತ್ತು. ವೆಂಕಟರಾಮಯ್ಯನವರ ಆದೇಶದ ಮೇರೆಗೆ ಗೋಕರ್ಣಕ್ಕೆ ಹೋಗಿ ಗುಪ್ತ ಕರಪತ್ರಗಳನ್ನು ತಯಾರಿಸುವ ಕೆಲಸದಲ್ಲಿ ಮುಖ್ಯ ಪಾತ್ರ ವಹಿಸಿದರು. ಅಂಬಿಗರ ಹುಡುಗರು ಗುಟ್ಟಾಗಿ ತಂದುಕೊಡುತ್ತಿದ್ದ ಬಾಂಬೆ ಕ್ರಾನಿಕಲ್ ಮತ್ತಿತರ ಪತ್ರಗಳನ್ನು ಕನ್ನಡದಲ್ಲಿ ಸುದ್ದಿ ಬರೆದು ಕೊಡುತ್ತಿದ್ದರು. ಇದನ್ನು ಅಂಬಿಗರ ಹೆಂಗಸರು ಹೊತ್ತು ಹೋಗಿ ನದಿಯ ನಡುವಣ ದೀಪದಲ್ಲಿ ಅಷ್ಟೇ ಗೌಪ್ಯವಾಗಿ ಸೈಕ್ಲೋಷ್ಟೈಲ್ ಮಾಡುತ್ತಿದ್ದರು. ಯಂತ್ರಗಳನ್ನು ಉಳಿದ ಹೊತ್ತು ದೋಣಿಯ ತಳಭಾಗದಲ್ಲಿ ತೂಗಿ ಹಾಕಿ ನೀರಿನಲ್ಲಿ ಅಡಗಿಸುವುದು. ಗಮನಿಸಿದ ಪೊಲೀಸರು ಬಂಧಿಸಿ ಕಾರವಾರ, ಚನ್ನಪಟ್ಟಣ ಜೈಲಿನಲ್ಲಿ ಶಿಕ್ಷೆ ನೀಡಿದರು. 1937ರ ಕೊನೆಯಲ್ಲಿ ಶ್ರೀ ವೀರಣ್ಣಗೌಡರು ಮತ್ತು ತಾಯಮ್ಮ ವೀರಣ್ಣಗೌಡ ಇವರೊಡನೆ ಮೈಸೂರು ಸಂಸ್ಥಾನದ ತಾಲ್ಲೂಕುಗಳನ್ನೆಲ್ಲಾ ಸಂಚರಿಸಿ ಕಾಂಗ್ರೆಸ್ ಪ್ರಚಾರ ಭಾಷಣ ಮಾಡಿದರು. ಮೈಸೂರು ಟೌನ್‌ಹಾಲ್ ಸತ್ಯಾಗ್ರಹ ಕಾಲದಲ್ಲಿ ಬೀದಿ ಗುಡಿಸುವವರ ವೇಷದಲ್ಲಿ ರಾತ್ರಿ ವೇಳೆ ಸ್ವಯಂ ಸೇವಕರಾಗಿ ಕರಪತ್ರಗಳನ್ನು ಹಂಚಿದರು. 1942ರ ಕ್ವಿಟ್ ಇಂಡಿಯಾ ಚಳುವಳಿ ಆರಂಭವಾದೊಡನೆ ಶ್ರೀಯುತರನ್ನು ಬಂಧಿಸಿ ಸೆಂಟ್ರಲ್

ಜೈಲಿನಲ್ಲಿಟ್ಟರು. ಜೈಲಿನಲ್ಲಿ ಬಂಧಿತರೊಡಗೂಡಿ ಭಾರತ ಓದುವುದು, ಕೈಲಾಸಂ, ಪುಟ್ಟಪ್ಪ ಅವರ ನಾಟಗಳನ್ನು ಅಭಿನಯಿಸುವುದು ನಡೆದವು. ಇವರೊಂದಿಗೆ ಎಚ್.ಎಸ್.ದೊರೆಸ್ವಾಮಿ, ಎಂಎನ್.ಜೋಯಿಸ್, ಶ್ರೀಧರ, ಚಾಮರಾಜನಗರದ ವೆಂಕಟರಾವ್. ಕೋಲಾರದ ಸರ್ವಜ್ಞಮೂರ್ತಿ ಇತರರು ಪಾತ್ರಧಾರಿಗಳಾಗಿದ್ದರು.

ಹುಣಸೂರು ತಾಲ್ಲೂಕು ಕೆ.ವಿ.ನಾರಾಯಣರಾವ್ ಹುಣಸೂರು ತಾಲ್ಲೂಕಿನ ಕಂಪ್ಲಾಪುರ ಗ್ರಾಮದವರು. ಶ್ರೀಯುತರು 1930ರಲ್ಲಿ ಹರಿಜನರ ಕಲ್ಯಾಣ ನಿಧಿ ಸಂಗ್ರಹಕ್ಕಾಗಿ ಕಣ್ಣೂರಿಗೆ ಮಹಾತ್ಮಗಾಂಧಿಯವರು ಹೋಗುವ ಮಾರ್ಗದಲ್ಲಿ ಹುಣಸೂರಿನಲ್ಲಿ ಕೆಲವು ನಿಮಿಷಗಳ ಕಾಲ ಭೇಟಿ ನೀಡಿದ್ದರು. ಆಗ ಶ್ರೀಯುತರು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದರು. ಗಾಂಧೀಜಿಯವರು ಹುಣಸೂರಿನಲ್ಲಿ ಮಾಡಿದ ಭಾಷಣದಲ್ಲಿ ಹರಿಜನರ ದುಸ್ಥಿತಿ, ಅಸ್ಪೃಶ್ಯತೆ, ಬಡತನ ನಿವಾರಣೆ ಕಾರ್ಯಗಳ ಬಗ್ಗೆ ಐದಾರು ನಿಮಿಷ ಚುಟುಕು ಭಾಷಣ ಮಾಡಿದರು ನಂತರ ಪುರಸಭೆಯ ಅಧ್ಯಕ್ಷರಿಂದ ಹರಿಜನ ನಿಧಿಯನ್ನು ಸ್ವೀಕರಿಸಿ ಮುಂದಕ್ಕೆ ಪ್ರಯಾಣ ಮಾಡಿದರು.

ಶ್ರೀನಿವಾಸ ಅಯ್ಯಂಗಾರ್ ನ್ಯಾಯವಾದಿಗಳು ಇವರು ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಸಂಬಂಧದಲ್ಲಿ ಜೈಲು ಅನುಭವಿಸಿದರು, ಇವರೊಡನೆ ಶ್ರೀಯುತರಾದ ಎಚ್.ಕೆ.ಸುಬ್ಬರಾವ್, ಅಗರಂ ರಂಗಯ್ಯ, ನಂಜರಾಜ ಅರಸ್, ಸುಬ್ಬರಾವ್, ಉಪಾಧ್ಯಾಯ ಕೃಷ್ಣಮೂರ್ತಿ ಮುಂತಾದವರಿದ್ದರು.ಮಾದಶೆಟ್ಟಿ ಅಥವಾ ಆಲೂರು ಶೆಟ್ಟಿ ಹುಣಸೂರಿನ ಆಲೂರಿನಲ್ಲಿ ಜನಿಸಿದರು. ಅದೇ ಊರಿನ ಕಾಂಗ್ರೆಸ್ ಮುಖಂಡರಾಗಿದ್ದ ಎನ್.ಶ್ರೀನಿವಾಸ್ ಅಯ್ಯಂಗಾರ್ ಮತ್ತು ಜಿ.ಕೃಷ್ಣಮೂರ್ತಿ ಅವರಿಂದಲೂ, ಗಾಂಧಿ ವಿಚಾರಧಾರೆಗಳಿಂದ ಪ್ರಭಾವಿತರಾಗಿ ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸಿದರು. ಸರಾಯಿ ಮತ್ತು ಹೆಂಡದಂಗಡಿ ಮುಂದೆ ಪಿಕೆಟಿಂಗ್ ನಡೆಸಿದರು. 1942 ರಿಂದ 1943ರ ತನಕ ಬಂಧಿತರಾಗಿ ಬೆಂಗಳೂರು ಹಾಗೂ ಶ್ರೀರಂಗಪಟ್ಟಣದ ಜೈಲಿನಲ್ಲಿ ಡಿಟೆನ್ಯೂಗಳಾಗಿ ಇದ್ದರು.

ಹೆಚ್.ಎಂ.ಸುಬ್ಬಕೃಷ್ಣಶೆಟ್ಟಿ, ದೊಡ್ಡನಾಯಕ ಶ್ರೀಯುತರು ಹುಣಸೂರಿನವರು ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಬೇಗೂರಿನಲ್ಲಿ ಅರೆಸ್ಟ್ ಆಗಿ ಮೈಸೂರ್ ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು. ಕೆ.ವಿ.ನಾರಾಯಣರಾವ್ ಹುಣಸೂರು ತಾಲೂಕಿನ ಕಂಪ್ಲಾಪುರ ಗ್ರಾಮದವರು. ಪುರಸಭಾ ಮೈದಾನದಲ್ಲಿ ಮತ್ತು ಸುಬ್ಬರಾಯನ ಕೆರೆ ಆವರಣದಲ್ಲಿ ಕಾಂಗ್ರೆಸ್ ಮುಖಂಡರಾದ ಎಚ್,ಕೆ.ವೀರಣ್ಣಗೌಡ, ಕೆ.ವಿಶ್ವೇಶ್ವರ, ರಂಗರಾಮಯ್ಯ, ಎಂ.ಎನ್.ಜೋಶಿ ಮುಂತಾದ ನಾಯಕರೊಡನೆ ತಾಲ್ಲೂಕಿನ ಎಲ್ಲಾ ಕಡೆ ಸಂಚರಿಸಿ ಸ್ವಾತಂತ್ರ ಚಳುವಳಿಯ ಮಹತ್ವವನ್ನು ತಿಳಿಸುವ ಕಾರ್ಯ ಮಾಡಿದರು. 1942ರ ಭಾರತ ಬಿಟ್ಟು ತೊಲಗಿ ಕಾರ್ಯದಲ್ಲಿದ್ದರು. ನಮ್ಮ ದೇಶದ ಸಂಗ್ರಾಮದ ಈ ಅಪೂರ್ವ ಮಹಾ ಚಳುವಳಿಯಲ್ಲಿ ಕೊಂಚವಾದರೂ ಭಾಗವಹಿಸಿದ ಸೌಭಾಗ್ಯವನ್ನು ಯಾವಾಗಲೂ ನಾನು ಹೆಮ್ಮೆಯಿಂದ ಸ್ಮರಿಸುತ್ತೇನೆ ಎಂದಿದ್ದಾರೆ.

ಪಿರಿಯಾಪಟ್ಟಣ ತಾಲ್ಲೂಕು ಬಿ.ಪಿ.ಸೂರ್ಯನಾರಾಯಣರಾವ್ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಗ್ರಾಮದವರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಕೊನೆಯ ವರ್ಷ

ವ್ಯಾಸಂಗ ಮಾಡುತ್ತಿದ್ದ ಸಂದರ್ಭ, ಗಾಂಧೀಜಿಯವರ ಕ್ವಿಟ್ ಇಂಡಿಯಾ ಚಳುವಳಿ ಮೈಸೂರಿನ ಎಲ್ಲಾ ವಿದ್ಯಾರ್ಥಿಗಳನ್ನು ಚಳುವಳಿಯತ್ತ ಆಕರ್ಷಿಸಿತು. ಸ್ನೇಹಿತರೊಡಗೂಡಿ ಬನ್ನೂರು, ಸೋಸಲೆ ಮತ್ತು ಟಿ.ನರಸೀಪುರ ಪ್ರದೇಶಗಳಲ್ಲಿ ಪ್ರಚಾರ ಕೈಗೊಂಡೆವು. ಇಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಿದ್ದಾಗ ಪೊಲೀಸರು ನನ್ನನ್ನು ದಸ್ತಗಿರಿ ಮಾಡಿ ಮೈಸೂರು ಜೈಲಿನಲ್ಲಿ ಇಟ್ಟರು.

**ಹುತಾತ್ಮರು**

ರಾಮಸ್ವಾಮಿ ಮೈಸೂರಿನ ಹಾರ್ಡ್ವಿಕ್ ಶಾಲೆಯ ವಿದ್ಯಾರ್ಥಿ. ರಾಮಸ್ವಾಮಿಗೆ ತನ್ನ ಶಾಲೆಗೆ ಹೋಗುವ ಮಾರ್ಗದಲ್ಲಿ ಸುಬ್ಬರಾಯನ ಕೆರೆಯಂಗಳವನ್ನು ಹಾದು ಹೋಗುವ ರೂಡಿ. ಅಲ್ಲಿ ಕಾಂಗ್ರೆಸ್ಸಿನ ಚಟುವಟಿಕೆಗಳು ಸದಾ ನಡೆಯುತ್ತಿದ್ದವು. ಭಾಷಣಗಳು ಜನರನ್ನು ಪ್ರಚೋದಿಸುತ್ತಿದ್ದವು. ಭಾಷಣಗಳನ್ನು ನಿಂತು ನೋಡಿ ಕೇಳಿದ ಅಪ್ರಾಪ್ತ ವಯಸ್ಕ ರಾಮಸ್ವಾಮಿಯ ಮೇಲೆ ಸಾಕಷ್ಟು ಪರಿಣಾಮ ಬೀರಿದವು. 1947 ಸೆಪ್ಟೆಂಬರ್ 13ರಂದು ಫೈವ್‌ಲೈಟ್ ಸರ್ಕಲ್‌ನಲ್ಲಿ (ಇಂದಿನ ರಾಮಸ್ವಾಮಿ ವೃತ್ತ) ಅರಮನೆ ಚಳುವಳಿಯ ಸಂದರ್ಭದಲ್ಲಿ ರಾಷ್ಟ್ರಧ್ವಜ ಹಾರಿಸಲು ಹೊರಟ ಮೆರವಣಿಗೆಯಲ್ಲಿ ಇವನು ಬೆರೆತ ಇಂದಿನ ರಾಮಸ್ವಾಮಿ ಸರ್ಕಲ್ ಬಳಿ ಮೆರವಣಿಗೆಯನ್ನು ಪೊಲೀಸರು ತಡೆದರು. ಯುವಕರು ಕಲ್ಲು ತೂರಿದರು. ಹಲವು ಪೋಲೀಸರು ಗಾಯ ಗೊಂಡರು, ಪರಿಸ್ಥಿತಿ ಹತೋಟಿ ಮೀರುತ್ತಿರುವುದನ್ನು ಮನಗಂಡ ಜಿಲ್ಲಾಧಿಕಾರಿ ಜಿ.ಎನ್.ನಾಗರಾಜರಾವ್ ಕುದುರೆ ಏರಿ ಕೈಯಲ್ಲಿ ರಿವಾಲ್ವರ್ ಹಿಡಿದು ಸ್ಥಳಕ್ಕೆ ಬಂದರು. ಮೆರವಣಿಗೆಯಲ್ಲಿದ್ದ ಯುವಕರು ಮುಂದೆ ಹೋಗಲೇ ಬೇಕೆಂದು ಹಠಮಾಡಿ ಮುನ್ನುಗ್ಗಿದರು. ಸಂಬಂಧಿಕರ ಮನೆಯಲ್ಲಿದ್ದು ಶಾಲೆಗೆ ಹೋಗುತ್ತಿದ್ದನು. ರಾಮಸ್ವಾಮಿ ಗುಂಪಿನ ಮುಂಚೂಣಿಯಲ್ಲಿದ್ದ. ಮುಂದೆ ಬಂದರೆ ಗುಂಡು ಹೊಡೆಯುವುದಾಗಿ ಪೊಲೀಸರು ಎಚ್ಚರಿಸಿದರು. ಮುನ್ನುಗ್ಗಿ ಗುಂಡು ಹೊಡೆಯಿರಿ ಎಂದು ಎದೆ ಚಾಚಿದ. ಗುಂಡು ಹೊಡೆದರು. ರಾಮಸ್ವಾಮಿಗೆ ಬಿತ್ತು ಅವನು ಅಲ್ಲಿಯೇ ಸತ್ತನು. ಹೀಗೆ ಮೃತನಾದ ರಾಮಸ್ವಾಮಿ ಅಂದಿನಿಂದ ಆ ಜಾಗ ರಾಮಸ್ವಾಮಿ ಸರ್ಕಲ್ ಆಯಿತು. ಈ ವೃತ್ತದಲ್ಲಿ ನಡೆದ ಗೋಲಿಬಾರಿಗೆ ಬಾಣವಾರದವನಾದ ರಾಮಸ್ವಾಮಿ ಜೊತೆಗೆ ತೋರಾನಾಯಕ್. ರಂಗ ಎಂಬ ಇಬ್ಬರು ತರುಣರು ಬಲಿಯಾಗಿದ್ದಾರೆ.

ಚಂದ್ರಶೇಖರ ಬಾಲಕ ಗಾರೆ ಕೆಲಸದವರಂತೆ ಸೋಗು ಹಾಕಿ 14.09.1947ರಂದು ಅರಮನೆಯ ಮೇಲೆ ರಾಷ್ಟ್ರಧ್ವಜ ಏರಿಸಿದನು. ತಾಳ್ಮೆಗೆಟ್ಟ ಪೊಲೀಸರು ಅವನ ಕೈಗಳನ್ನು ಜಜ್ಜಿದರು. ಪೋಲಿಸರಿಂದ ಹೊಡೆದ ಗುಂಡು ಚಂದ್ರಶೇಖರನ ತಲೆಯನ್ನು ಹಾದುಹೋದರು ಅವನು ಜೀವದಿಂದ ಉಳಿದನು ಎಂದಿದ್ದಾರೆ.

1942 ಅಕ್ಟೋಬರ್ 28ನೇ ದಿನಾಂಕದ ಮಧ್ಯರಾತ್ರಿಯಲ್ಲಿ ದಾರುಣ ಕೃತ್ಯ ನಡೆಯಿತು. ಪೊಲೀಸರು ಇದ್ದಕ್ಕಿದ್ದಂತೆ ಮುಖಮೂತಿ ನೋಡದೆ ಸೆರೆಮನೆಯಲ್ಲಿದ್ದ ಎಲ್ಲರನ್ನೂ ಲಾಠಿಯಿಂದ ಬಡಿದರು. ಅದರಿಂದಾಗಿ ಆ.ಕ.ಸಿದ್ದಲಿಂಗ ಶಾಸ್ತ್ರಿಗಳ ಕಣ್ಣು, ಹಣೆಗಳಿಂದ ಧಾರಾಕಾರ ರಕ್ತದ ಪ್ರವಾಹ ಹರಿಯಿತು, ಸೆರೆಮನೆಯ ಆಸ್ಪತ್ರೆಯಲ್ಲಿಯೇ ಎಲ್ಲರಿಗೂ ಚಿಕಿತ್ಸೆ ದೊರೆತರೆ, ಸಹಯೋಧ ಕೃಷ್ಣರಾಜನಗರ ತಾಲೂಕು ಕೋಳೂರು ಗ್ರಾಮದ 22 ವರ್ಷ ಶಂಕರಪ್ಪ ಕಾಲ್ತುಳಿತಕ್ಕೆ ಸಿಕ್ಕಿ ಅಸುನೀಗಿದನು.

1938ರ ವಿದುರಾಶ್ವತ್ಥದಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನಕ್ಕೆ ಹೋಗಿ ಬಂಧನಕ್ಕೆ ಒಳಗಾಗಿ, ಜೈಲಿನಲ್ಲಿ ಕೊಟ್ಟ ಕಿರುಕುಳದಿಂದ ಪ್ರಹ್ಲಾದಶೆಟ್ಟಿ, ಶಿರಾದ ಉಗ್ರಪ್ಪ, ಕಸ್ತೂರಿರಂಗಪ್ಪನಹಳ್ಳಿಯ ಹನುಮಂತಪ್ಪ, ನೆಲಮಂಗಲದ ಕೃಷ್ಣಮೂರ್ತಿ ಸತ್ತು ಹೋದರು. 1942ರ ಚಳುವಳಿಯಲ್ಲಿ ಭಾಗವಹಿಸಿ ಜೈಲಿನಲ್ಲಿದ್ದ ಕೊಣನೂರಿನ ರಾಮಶೆಟ್ಟಿ ಎಂಬ ಯುವಕ ಆಮಶಂಕೆಯಿಂದ ನರಳುತ್ತಿದ್ದ, ಸರಿಯಾದ ವೈದ್ಯಕೀಯ ಸೌಲಭ್ಯ ದೊರೆಯಲಿಲ್ಲ. ಜೈಲಿನಲ್ಲಿಯೇ ಮೃತನಾದನು. ಹೀಗೆ ನೂರಾರು ಮುಗ್ದ ಯುವಕರು ಬ್ರಿಟಿಷರ ಬೂಟು, ಗುಂಡು, ಲಾಟಿ ಏಟಿಗೆ ಬಲಿಯಾದರು.

ಸಾವಿರಾರು ಮುಗ್ದ ಜನರ ಬಲಿದಾನ, ಹೋರಾಟಗಳ ಪರಿಣಾಮ ಲಾರ್ಡ್‌ಮೌಂಟ್ ಬ್ಯಾಟನ್‌ನ ವರದಿಯನ್ನು ಆಧಾರಿಸಿ 1947 ಜುಲೈನಲ್ಲಿ ಬ್ರಿಟನ್ ಪಾರ್ಲಿಮೆಂಟ್ ಭಾರತದ ಸ್ವಾತಂತ್ರ್ಯದ ಕಾಯಿದೆಯನ್ನು ಅಂಗೀಕರಿಸಿತು. ಅಂತೆಯೇ 1947 ಆಗಸ್ಟ್ 15ರಂದು ಭಾರತ ಬ್ರಿಟಿಷರ ಅಧೀನದಿಂದ ಸ್ವಾತಂತ್ರ್ಯವಾಯಿತು. ಮಹಾರಾಜ ಜಯಚಾಮರಾಜ ಒಡೆಯರು ವಿಲೀನ ಪತ್ರಕ್ಕೆ ಸಹಿ ಹಾಕಿದರು. ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರಿಸಿದರು. ಜಯಚಾಮರಾಜ ಒಡೆಯರು ಸ್ವಾತಂತ್ರೋತ್ತರ ಕರ್ನಾಟಕದ ಮೊದಲ ರಾಜ್ಯಪಾಲರಾದರು. ಆದರೆ ಮೈಸೂರಿನ ಜನತೆಗೆ ಪ್ರಜಾಪ್ರಭುತ್ವಯುಕ್ತ ಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆ ಆಗಲಿಲ್ಲ. ಪ್ರಯುಕ್ತ ಸೆಪ್ಟಂಬರ್ 3, 1947ರಂದು ಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಮೈಸೂರು ಚಲೋ ಚಳುವಳಿ ಆರಂಭವಾಯಿತು.

ಮೈಸೂರಿನ ಆರಮನೆ ಸತ್ಯಾಗ್ರಹ 42 ದಿನಗಳ ಕಾಲ ನಡೆಯಿತು. 1947 ಆಕ್ಟೋಬರ್ 24ರ ವಿಜಯ ದಶಮಿಯಂದು ಜವಾಬ್ದಾರಿ ಸರ್ಕಾರ ರಚಿಸಿದರು. ಕೆ.ಸಿ.ರೆಡ್ಡಿ 1947 ಆಕ್ಟೋಬರ್ 29ರಂದು ಮೈಸೂರು ರಾಜ್ಯದ ಪ್ರಥಮ ಮುಖ್ಯ ಮಂತ್ರಿಯಾಗಿಯೂ, ಜಯಚಾಮರಾಜ ಒಡೆಯರು ಪ್ರಥಮ ರಾಜ ಪ್ರಮುಖರಾದರು.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು ಎಂಬ ಕುವೆಂಪು ಅವರ ಬಲಿದಾನ ನಾಟಕದ ಮಾತು ನಿಜವಾಗಿದೆ. ಅಂದಿನ ಬಲಿದಾನದಿಂದ ನಮಗೆ ಹಾಗೂ ನಮ್ಮ ದೇಶಕ್ಕೆ ಸ್ವಾತಂತ್ರ್ಯದ ಸುಖ ಬಂದಿದೆ.

**ಪರಾಮರ್ಶನ ಗ್ರಂಥಗಳು**


- ಪ್ರಾಣೇಶ್‌ರಾವ್. ಬಿ.ಆರ್. (1999). ಭಾರತದ ಸ್ವಾತಂತ್ರ್ಯ ಹೋರಾಟದ ಮೇರು ವ್ಯಕ್ತಿಗಳು. ನವಭಾರತಿ ಪ್ರಕಾಶನ, ಮೈಸೂರು.
- ಮೈಸೂರು ತಾಲ್ಲೂಕು ಗ್ಯಾಸೆಟಿಯರ್. (2010). ಕರ್ನಾಟಕ ಸರ್ಕಾರದ ಪ್ರಕಟಣೆ, ಬೆಂಗಳೂರು.
- ದೊರೆಸ್ವಾಮಿ. ಎಚ್.ಎಸ್. (1977). ಸ್ವಾತಂತ್ರ್ಯ ಸಂಗ್ರಾಮ ಕರ್ನಾಟಕ. ಸಾಹಿತ್ಯ ಮಂದಿರ ಪ್ರಕಾಶನ, ಬೆಂಗಳೂರು.

- ವಸಂತ ಕುಮಾರ್. ಬಿ.ವಿ. (2020). ಆರಡಿಗೋಳ್ ಸಾಹಿತ್ಯ ಅವಲೋಕನ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಬೆಂಗಳೂರು.
- ಸೂರ್ಯನಾಥ ಕಾಮತ್. (1998). ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
- ಶ್ರೀರಂಗ. (1989). ನಲವತ್ತೆರಡರ ಚಲೇಜಾವ್ ಚಳುವಳಿ. ಪುರೋಗಾಮಿ, ಬೆಂಗಳೂರು.
- ಗೋಪಾಲ್. ಆರ್. (2010). ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
- ಸೂರ್ಯನಾಥ ಕಾಮತ್. (1984). ಕರ್ನಾಟಕ ರಾಜ್ಯ ಗ್ಯಾಸೆಟಿಯರ್. ಕರ್ನಾಟಕ ರಾಜ್ಯ ಸರಕಾರದ ಪ್ರಕಟಣೆ, ಬೆಂಗಳೂರು.